# ಶರಣರು ಮತ್ತು ಕುಲಕಸುಬುಗಳು

**ಚಂದ್ರಪ್ಪ ಬಾರಂಗಿ***

**DOI: https://doi.org/10.5281/zenodo.21438169**

**ABSTRACT**

12ನೇ ಶತಮಾನದ ವಚನ ಸಾಹಿತ್ಯವು ಕಾಯಕದ ಮಹತ್ವವನ್ನು ಸಾರಿ, ಶ್ರಮಗೌರವವನ್ನು ಎತ್ತಿಹಿಡಿದ ಅಪೂರ್ವ ಕಾಲಘಟ್ಟವಾಗಿದೆ. 'ಅನುಭವ ಮಂಟಪ'ದ ಮೂಲಕ ಪ್ರಜಾಪ್ರಭುತ್ವ ಮತ್ತು ಗ್ರಾಮ ಸ್ವರಾಜ್ಯದ ಕಲ್ಪನೆಗಳಿಗೆ ಶರಣರು ಭದ್ರ ಬುನಾದಿ ಹಾಕಿದರು. ಐತಿಹಾಸಿಕವಾಗಿ ವೃತ್ತಿಗಳ ಆಧಾರದ ಮೇಲೆ ಸೃಷ್ಟಿಯಾಗಿದ್ದ ಜಾತೀಯತೆ ಮತ್ತು ಮೇಲು–ಕೀಳುಗಳ ತಾರತಮ್ಯವನ್ನು ತೊಡೆದುಹಾಕುವಲ್ಲಿ ಅವರ ಸಾಮಾಜಿಕ ಕ್ರಾಂತಿ ಮಹತ್ವದ್ದಾಗಿದೆ. ಯಾವುದೇ ಕುಲಕಸುಬಾಗಿದ್ದರೂ, ಅದನ್ನು ನಿಷ್ಠೆ, ಪ್ರಾಮಾಣಿಕತೆ ಮತ್ತು ಸತ್ಯಶುದ್ಧತೆಯಿಂದ ನಿರ್ವಹಿಸಿದರೆ ಅದು 'ಕಾಯಕ'ವಾಗಿ ಪರಿಣಮಿಸಿ ಆಧ್ಯಾತ್ಮಿಕ ಉನ್ನತಿಗೆ ದಾರಿಯಾಗುತ್ತದೆ ಎಂಬುದನ್ನು ಬಸವಾದಿ ಪ್ರಮಥರು ಸಾಬೀತುಪಡಿಸಿದರು. ಅಂಬಿಗ, ಮಡಿವಾಳ, ಸಮಗಾರ, ನೇಕಾರ ಸೇರಿದಂತೆ ವಿವಿಧ ಶ್ರಮಿಕ ವೃತ್ತಿಗಳನ್ನು ಅವಲಂಬಿಸಿದ ಶರಣರು ತಮ್ಮ ಕಾಯಕದ ಮೂಲಕವೇ ಮುಕ್ತಿ ಕಂಡುಕೊಂಡ ಬಗೆ ಹಾಗೂ ವಚನ ಸಾಹಿತ್ಯದಲ್ಲಿನ ಕಸುಬುಗಳ ವರ್ಗೀಕರಣವನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಶರಣರ ಕಾಯಕ ಮೀಮಾಂಸೆಯು ಇಂದಿಗೂ ಸಾರ್ವಕಾಲಿಕ ಪ್ರಸ್ತುತತೆಯನ್ನು ಹೊಂದಿದೆ.

**KEYWORDS:** ವಚನ ಸಾಹಿತ್ಯ, ಶರಣರು, ಕುಲಕಸುಬುಗಳು, ಕಾಯಕ, ಶ್ರಮಗೌರವ.

* **ಚಂದ್ರಪ್ಪ ಬಾರಂಗಿ,** ಸಂಶೋಧನಾ ವಿದ್ಯಾರ್ಥಿ, ಎಂ.ಎಂ. ಕಲಬುರ್ಗಿ ಸಂಶೋಧನಾ ಕೇಂದ್ರ, ಜಗದ್ಗುರು ತೋಂಟದಾರ್ಯ ಮಠ, ಗದಗ.

ಚಂದ್ರಪ್ಪ ಬಾರಂಗಿ ಸಾರಲೇಖ 12ನೆಯ ಶತಮಾನ ವಚನ ಸಾಹಿತ್ಯ, ಸಾಹಿತ್ಯ ಸೃಷ್ಟಿಯ ಪರಮಯುಗ. ಬಸವಾದಿ ಶರಣರ ಆದಿಯಾಗಿ ಅಂದಾಜು ನಾಲ್ಕು ನೂರಕ್ಕೂ ಅಧಿಕ ವಚನಕಾರರು ವಚನಗಳನ್ನು ರಚಿಸಿದ್ದಾರೆ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ವಚನ ಸಾಹಿತ್ಯದ ವಚನಗಳಂತೂ ಓದಿದರೆ ಗದ್ಯವಾಗುವ, ಹಾಡಿದರೆ ಪದ್ಯವಾಗುವ ಸಾಹಿತ್ಯವಾಗಿದೆ ಎಂದರೆ ಅತಿಶಯೋಕ್ತಿಯಲ್ಲ. ಪ್ರಪಂಚಕ್ಕೆ ಕಾಯಕದ ಮಹತ್ವವನ್ನು ಸಾರಿ ಹೇಳಿದ್ದು ವಚನ ಸಾಹಿತ್ಯ. ಜಗತ್ತಿನ ಮೊದಲ ಸಂಸತ್ತು ಎಂಬ ಹೆಗ್ಗಳಿಕೆ "ಅನುಭವ ಮಂಟಪ"ಕ್ಕಿದೆ. ಇದು ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾದರಿಯಾಗಿದೆ. ವಚನ ಸಾಹಿತ್ಯದಲ್ಲಿ ಸಮಕಾಲೀನತೆಗೆ ಸರಿಹೊಂದುವ ಜೀವನ ಮೌಲ್ಯಗಳು ಎದ್ದು ಕಾಣುತ್ತವೆ. ಶರಣರ ಕಾಯಕವೂ – ಆರ್ಥಿಕ ಸ್ವಾವಲಂಬನೆ, ಗ್ರಾಮ ಸ್ವರಾಜ್ಯ ಪರಿಕಲ್ಪನೆ, ದುಡಿದು ತಿನ್ನುವ ನಿಷ್ಠೆ ಅಷ್ಟೇ ಮಹತ್ವದ್ದಾಗಿದೆ.

ಭಾರತವು ಹಳ್ಳಿಗಳಿಂದ ಕೂಡಿದ ದೇಶ. ಹಳ್ಳಿಗಳು ಏಳಿಗೆಯಾಗದ ಹೊರತು ರಾಷ್ಟ್ರದ ಏಳಿಗೆ ಇಲ್ಲ. ಗಾಂಧೀಜಿಯವರು ಮೂಲ ಶಿಕ್ಷಣ ಮತ್ತು ಗುಡಿಕೈಗಾರಿಕೆಗಳಿಂದ ಭಾರತದ ಗ್ರಾಮ ಸ್ವರಾಜ್ಯ ಸಾಧ್ಯ ಎಂದು ಹೇಳಿದ್ದಾರೆ. ಶರಣರ ಚಿಂತನೆಗಳ ಹಿನ್ನೆಲೆಯಲ್ಲಿ ಶರಣರು ಮತ್ತು ಕುಲಕಸುಬುಗಳು ಕುರಿತು ಪ್ರಸ್ತುತ ಲೇಖನದಲ್ಲಿ ಚರ್ಚಿಸಲಾಗಿದೆ.

ಇಂದಿನ ಉದ್ಯೋಗ ಸಮಸ್ಯೆಗೆ ಕುಲಕಸುಬುಗಳ ಮೂಲಕ ಶರಣರು ಹಿಂದೆ ಆಯಗಾರಿಕೆ, ಗುಡಿಕೈಗಾರಿಕೆ ಮತ್ತು ಸ್ವಯಂ ಉದ್ಯೋಗವನ್ನು ಕಂಡುಕೊಂಡಿದ್ದರು. ಆದ್ದರಿಂದ ಪ್ರಸ್ತುತ ಅಧ್ಯಯನದ ಮೂಲಕ ಕುಲಕಸುಬುಗಳಿಂದ ನಿರುದ್ಯೋಗ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ, ಗ್ರಾಮ ಸ್ವರಾಜ್ಯದಿಂದ ಗ್ರಾಮಗಳನ್ನು ಸ್ವತಂತ್ರ ಪ್ರಜಾರಾಜ್ಯಗಳನ್ನಾಗಿ ಕಾಣುವ ಸಣ್ಣ ತನ ಮಾಡಬಹುದು. ಕುಲಕಸುಬುಗಳು ಇಂದು ಆಧುನಿಕೀಕರಣಗೊಂಡಿದ್ದರೂ, ಅವುಗಳ ಮಹತ್ವ ಅರಿಯಬೇಕಾಗಿದೆ.

ಕುಲಕಸುಬುಗಳ ಹುಟ್ಟು, ಇತಿಹಾಸವನ್ನು ನಿಖರವಾಗಿ ಕಂಡುಕೊಳ್ಳುವುದು ಬಹಳ ಕಷ್ಟ. ಮಾನವ ಸಮಾಜ ವಿಕಾಸವಾದಂತೆಲ್ಲ ಬದುಕುವ ಮಾರ್ಗವನ್ನು ಕಂಡುಕೊಳ್ಳುವ ಅಗತ್ಯ ಒದಗಿಬಂದಿರಬೇಕು. ಆಗ ಮಾನವರು ತಮ್ಮ ಕುಶಲಕಲೆಗಳನ್ನು ಜೀವನೋಪಾಯಕ್ಕೆ ಬಳಸಿಕೊಳ್ಳಲು ಆರಂಭಿಸಿದರು. ನಾಗರಿಕ ಬದುಕಿಗೂ ಅವರ ಕುಶಲಕಲೆಗಳಿಗೂ ನೇರ ಸಂಬಂಧವಿದೆ. ಅಲೆಮಾರಿ ಮನುಷ್ಯ ಒಂದು ಕಡೆ ನೆಲೆ ನಿಲ್ಲುವುದನ್ನು ಕಂಡುಕೊಂಡ ಮೇಲೆ ಮಣ್ಣು, ಕಲ್ಲು, ಕಟ್ಟಿಗೆ, ಮರ, ತೊಗಟೆ, ಚರ್ಮ, ಮೊದಲಾದ ಸಾಮಗ್ರಿಗಳನ್ನು ತನ್ನ ಕುಶಲಮತಿಯಿಂದ ಬಳಸಿಕೊಳ್ಳುತ್ತಾ ಬಂದ ಹಿನ್ನೆಲೆಯೇ ಕುಶಲಕಲೆಗಳ ಹುಟ್ಟಿಗೆ ಕಾರಣವಾಗಿದೆ. ಮನುಷ್ಯನ ಬದುಕು ನಾಗರಿಕತೆಯತ್ತ ವಾಲಿದಂತೆ ಸುಖಜೀವನದ ಲಾಲಸೆ ಉಂಟಾಯಿತು. ಸುಖ ಜೀವನದ ಕಡೆ ಮನಸ್ಸು ವಾಲಿತು. ಆಗ ಮನುಜರಲ್ಲಿ ಕೆಲವರು ತಮ್ಮ ಕುಶಲಕಲೆಗಳಿಂದ ಈ ಭೋಗಾಭಿಲಾಷೆಯನ್ನು ತೃಪ್ತಿಪಡಿಸಿದರು. ಅದರಲ್ಲಿ ಮೂಲಭೂತವಾಗಿ ಮನೆಕಟ್ಟುವ ಅಥವಾ ಕಲ್ಲುಕುಟ್ಟುವವರು, ಶಿಲ್ಪಿಗಳು, ಕಮ್ಮಾರರು, ಬಡಿಗರು, ಚಿನಿವಾರರು, ಚಿಪ್ಪಿಗರು, ಅಂಬಿಗರು, ಕುಂಬಾರರು, ವ್ಯಾಪಾರಿಗಳು ಹೀಗೆ ಅವರ ಅಸ್ತಿತ್ವವನ್ನು ಕಾಣಬಹುದು.

ಹೀಗೆ ಮುಂದೆ ಬದುಕು ಸಾಗಿದಂತೆ, ಜೀವನ ಕಾಲಕಳೆದಂತೆ ಈ ಕುಶಲಕಲೆಗಾರರು, ತಮ್ಮ ಕುಲಕಸುಬುಗಳನ್ನಾಗಿ ಮಾಡಿಕೊಂಡು ಬಂದಿರುವುದು ಇತಿಹಾಸದಿಂದ ತಿಳಿದುಬರುತ್ತದೆ. ಮನುಸ್ಮೃತಿಯನ್ನು ಪ್ರಾಸಂಗಿಕವಾಗಿ ಅಧ್ಯಯನ ಮಾಡಿದರೆ ಅಲ್ಲಿ

ಕುಶಲಕರ್ಮಿಗಳ ಬಗ್ಗೆ ತಿಳಿದುಬರುತ್ತದೆ. ಮನು ವಿವಿಧ ವೃತ್ತಿಯವರು ಬಳಸುತ್ತಿದ್ದ ಸಲಕರಣೆಗಳನ್ನು, ಅವರ ಕೆಲಸಕಾರ್ಯಗಳ ವಿಧಾನಗಳನ್ನು ಹಾಗೂ ಸರಕುಗಳ ಮೊದಲಾದ ವಿಚಾರಗಳನ್ನು ಉಲ್ಲೇಖಿಸುತ್ತಾನೆ.

ಕುಲಕಸುಬುದಾರರು ತಮ್ಮ ಉಪಜೀವನಕ್ಕೆ ಕಂಡುಕೊಂಡ ಕುಲಕಸುಬುಗಳು ಉದಾ: ಮಾನವ ಕೃಷಿಯ ಮೂಲಕ ಆಹಾರ ಉತ್ಪಾದನೆ ಪ್ರಾರಂಭಿಸಿದ ಮೇಲೆ ಅವನ ಉತ್ಪಾದನೆಗೆ ಬೇಕಾಗುವಂತಹ ಅನೇಕ ಕೃಷಿ ಉಪಕರಣಗಳನ್ನು ಸೃಷ್ಟಿಸುವ ಮೂಲಕ ತಮ್ಮ ಅಸ್ತಿತ್ವವನ್ನು ಕಮ್ಮಾರರು ಗುರುತಿಸಿಕೊಳ್ಳತೊಡಗಿದರು. ಹೀಗೆ ವಿವಿಧ ಬಗೆಯ ಕುಲಕಸುಬುಗಳ ಹಿನ್ನೆಲೆಯನ್ನು ನಾವು ನೋಡಬಹುದು.

ಶರಣರು ತಮ್ಮ ವಚನಗಳಲ್ಲಿ ಕಸುಬುಗಳ ಕುರಿತು ಹೇಳಿರುವುದು ಕಂಡುಬರುತ್ತದೆ. ಕಸುಬುಗಳ ವರ್ಗೀಕರಣವನ್ನು ಕಾಣಬಹುದು. ಶರಣರು ಕುಲ ಮತ್ತು ಕಸುಬುಗಳನ್ನು ಬೇರೆಬೇರೆಯಾಗಿ ನೋಡಿದವರು. ಕುಲದ ವಿಕಾರಗಳು ಶರಣರ ನಡೆನುಡಿಯಲ್ಲಿ ಇರಲಿಲ್ಲವೆಂದು ಹೇಳಬಹುದು.

ಪ್ರಮುಖ ಪದಗಳು: ಶರಣ, ಕುಲ, ಕಸುಬುಗಳು, ವರ್ಗೀಕರಣ, ಕಾಯಕ, ದಾಸೋಹ, ಭಕ್ತಿ, ಆಧ್ಯಾತ್ಮ, ಜಾತಿ, ಪ್ರಾಮಾಣಿಕತೆ, ಶ್ರಮಗೌರವ, ಮುಕ್ತಿ

ಪ್ರಸ್ತಾವನೆ ''ಕಸ ಹೊಡೆದವನ ಕೈ ಕಸ್ತೂರಿ ಗೊನಿನಾತ''[1] ಎಂಬುದು ಜನಪದರ ಜೀವನ ದೃಷ್ಟಿ,''ಶರಣರ ಅನುಭಾವ ಮಡಿವಾಳನ ಕಾಯಕದಂತೆ''[2] ಎಂದು ಬಸವಣ್ಣನವರು ಹೇಳಿದ್ದಾರೆ. ಶರಣರ ಅನುಭಾವ ದುಡಿದು ಬದುಕು ಸಾಗಿಸುವುದು. ದುಡಿಮೆರಹಿತ ಬದುಕು ಪಾಪಕರವಾದದ್ದು ಎಂದು ನಂಬಿದ್ದವರು. ದುಡಿಮೆಯಲ್ಲಿ ಭಕ್ತಿ, ಸತ್ಯ, ನಿಷ್ಠೆ, ಪ್ರಾಮಾಣಿಕತೆ ಇರಬೇಕು. ಪರಿಶ್ರಮವಹಿಸುವ ದುಡಿಮೆಯನ್ನು ಶರಣರು ಪ್ರೀತಿಸಿ ಗೌರವಿಸಿದರು. ಅವರವರ ಅರ್ಹತೆಗೆ ಹಾಗೂ ಪರಿಣಿತಿಗೆ ತಕ್ಕಂತೆ ಯಾವುದೇ ವೃತ್ತಿಯನ್ನಾದರೂ ಕೈಗೊಳ್ಳುವ ಸ್ವಾತಂತ್ರ್ಯ ಶರಣರಲ್ಲಿತ್ತು. ಕಾಯಕವೇ ಕೈಲಾಸವೆಂದು ನಂಬಿದ್ದ ಶರಣರು ಕಸುಬುಗಳಿಗೆ/ವೃತ್ತಿಗಳಿಗೆ ಹೊಸ ಆಯಾಮ ಕೊಟ್ಟವರು. ಕೃಷಿಕ, ಒಕ್ಕಲಿಗ, ಕಮ್ಮಾರ, ಕುಂಬಾರ, ಬಡಿಗ, nೇಕಾರ, ಕ್ಷೌರಿಕ, ಮೇದಾರ, ಡೋಹಾರ, ಅಗಸ, ಗಾಣಿಗ, ತೋಟಿಗ, ವ್ಯಾಪಾರಿ, ಸಿಂಪಿಗ, ಕೂಲಿಕಾರರು, ಕುಶಲ ಕರ್ಮಿಗಳು, ಹೆಳವರು, ನಾಟಿ ವೈದ್ಯ / ಜನಪದ ವೈದ್ಯ / ಮನೆ ವೈದ್ಯ, ಕಿಳ್ಳೆಕ್ಯಾತರು, ಕುರುಬರು, ನಾಡವರು, ರಾಜರು, ರಾಣಿಯರು, ಕರಣಿಕರು, ಮಂತ್ರಿಗಳು, ಗುರುಗಳು, ಕವಿಗಳು, ಪಂಡಿತರು, ಓಲೆಕಾರರು, ಯೋಗಿಗಳು, ಧಾರ್ಮಿಕ ಆಚರಣೆಕಾರರು, ಧೂಪದವರು, ಅಗ್ಗವಣಿಯವರು, ಹೂಗಾರರು, ಜನಪದ ಕಲಾವಿದರು, ಹೀಗೆ ಎಲ್ಲ ವರ್ಗ ಜಾತಿಗಳಿಂದ, ನಾನಾ ಪ್ರದೇಶಗಳಿಂದ ಬಂದ ವಚನಕಾರರು ತಮಗೆ ಇಷ್ಟದ ಕಾಯಕ ಮಾಡುವಲ್ಲಿ ತೃಪ್ತಿ ಕಂಡವರು.

**ಶರಣ ಪದದ ಅರ್ಥ ಮತ್ತು ಆಶಯ**

ಶರಣ ಎಂದರೆ ಆಶ್ರಯದಾತ, ರಕ್ಷಕ, ಕಾಪಾಡುವವನು, ಮನೆ/ನಿವಾಸ, ದೇವರಿಗೆ ತನ್ನನ್ನು ಸಮರ್ಪಿಸಿಕೊಂಡವನು/ಭಕ್ತ[3] ಮುಂತಾದ ಅರ್ಥಗಳಿವೆ.

ಶರಣ ಮೂಲತಃ ಸಂಸ್ಕೃತ ಪದ. ಹಿಂದಿನ ಅರ್ಥವನ್ನು ಈಗ ಇದು ಹೊಂದಿಲ್ಲ. ಅರ್ಥ ವ್ಯತ್ಯಾಸ ಹೊಂದಿದೆ. ನಮ್ಮ ಪ್ರಾಚೀನ ಸಾಹಿತ್ಯದಲ್ಲಿ ಶರಣ ಎಂಬ ಪದ ವ್ಯಾಪಕವಾಗಿ ಬಳಕೆಗೊಂಡಿದ್ದು, ವೀರಶೈವರಲ್ಲಿ 'ಶರಣ' ಶಬ್ದದ ಬಳಕೆಗೆ ಒಂದು ವಿಶಿಷ್ಟ ಅರ್ಥವಿದೆ. ಶರಣನನ್ನು ಶಿವಯೋಗ ಸಾಧಕ, ಶಿವನಿಗೆ ಶರಣು ಹೊಕ್ಕವನು ಎಂಬರ್ಥದಲ್ಲಿ ಬಳಕೆ

ಮಾಡಿದ್ದಾರೆ. ಈ ದೃಷ್ಟಿಯಿಂದ ಶರಣ ವ್ಯಕ್ತಿವಾಚಕವಲ್ಲ, ಧರ್ಮ ವಾಚಕ ಶಬ್ದ. ಶರಣನಾಗುವುದು ಒಂದು ಸಾಧನೆ. ವೀರಶೈವ ಸಾಹಿತ್ಯದಲ್ಲಿ ನಿರೂಪಿತವಾಗಿರುವ ಶರಣ ಗುಣಗಳನ್ನು ಮೈಗೂಡಿಸಿಕೊಂಡು ಬಾಳುವ ಶರಣ ಜಗತ್ತಿಗೆ ಆದರ್ಶ ಪುರುಷ. ಹೀಗಾಗಿಯೇ ಚೆನ್ನಬಸವಣ್ಣ ಹೇಳುವಂತೆ 'ಕೋಟಿಗೊಬ್ಬ ಶರಣ'[4] ಕಂಡುಬರಬಹುದು. ಪರಮಾತ್ಮನ ಲೀಲಾ ಭೂಮಿಯಾದ ಈ ಭವದ ಕಣಕಣದಲ್ಲೂ ಅವನನ್ನು ಕಾಣುವ ನಿರ್ಗುಣೋಪಾಸಕ, ನೈಷ್ಠಿಕ ಬದುಕನ್ನು ತನ್ನ ಜೀವನದ ವ್ರತವನ್ನಾಗಿ ಸ್ವೀಕರಿಸಿರುವ ಅಚ್ಚ ಶರಣ. ಶರಣರ ಬಾಳು ಮರಣದಲ್ಲಿ ನೋಡು (ಗಾದೆ).

ಶರಣನ ಬದುಕು ಅವನ ಗುಣ ಸ್ವಭಾವಗಳು ಹೇಗಿರಬೇಕು ಎಂಬುದರ ಬಗ್ಗೆ ಸಾಮಾನ್ಯವಾಗಿ ಎಲ್ಲ ಶರಣರೂ ತಮ್ಮ ತಮ್ಮ ವಚನಗಳಲ್ಲಿ ಚಿಂತನೆ ಮಾಡಿದ್ದಾರೆ. ಸಿದ್ಧರಾಮನ ಶರಣ ಪರಿಕಲ್ಪನೆಯೆಂದರೆ 'ಶರ' ಎಂದೆಡೆ ಬಾಣ, 'ನ' ಎಂದೆಡೆ ಅಂಥ ಮನ್ಮಥ ಬಾಣವಿಲ್ಲದವನೇ 'ಶರಣ' ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ',[5] ಅಂದರೆ ಕಾಮನಬಾಣಕ್ಕೆ ಸಿಕ್ಕದವನು, ಇಂದ್ರಿಯಗಳನ್ನು ಜಯಿಸಿರುವವನು ಶರಣ ಎಂದು ಹೇಳಿ ಶರಣನ ಘನತೆಯನ್ನು ಎತ್ತಿ ಹಿಡಿದಿದ್ದಾನೆ.

ಶರಣ ಬೇರೆಯಲ್ಲ, ಪರಮಾತ್ಮ ಬೇರೆಯಲ್ಲ; ವಾಸ್ತವವಾಗಿ ಶರಣ ಶಿವನ ಪ್ರತಿರೂಪ, ಅವನ ಪ್ರತಿನಿಧಿ. ವಿಭೂತಿ ಇವನ ಲಾಂಛನ, ಇಷ್ಟಲಿಂಗ ಇವನ ಆಭರಣ. ಇಂಥ ಶರಣ ಬಸವಣ್ಣನವರಿಗೆ ಪರಮ ಪೂಜ್ಯ, ದೇವತಾ ಸ್ವರೂಪಿ, ಇಂಥ ಶರಣರನ್ನು ಕಂಡರೆ ಬಸವಣ್ಣನವರ ಹೃದಯ ತಾಯಿಹೃದಯದಂತೆ ಹೊರಹೊಮ್ಮುತ್ತದೆ.

ಶರಣರು ಜಾತಿ-ಮತ-ಪಂಥಗಳ ಪರಿಧಿಯನ್ನು ದಾಟಿ ಮಾನವತೆಯ ವಾರಿಧಿಯಲ್ಲಿ ಮಿಂದವರಾಗಿದ್ದಾರೆ. ಶರಣರ ದೃಷ್ಟಿಯಲ್ಲಿ ಮನುಷ್ಯರೆಲ್ಲ ಒಂದೇ ಜಾತಿ, ಅದು ಶಿವಭಕ್ತರ ಜಾತಿ. ಸಾಧನೆಗೆ, ಭಕ್ತಿಗೆ ಜಾತಿ ಅಡ್ಡ ಬರಬಾರದು. ತಮ್ಮ ಅನವರತ ಸಾಧನೆಯಿಂದ ಅಗಮ್ಯ, ಅಪ್ರಮಾಣ, ಅಗೋಚರ ತತ್ವವನ್ನು ಸಾಕ್ಷಾತ್ಕರಿಸಿಕೊಂಡವರೇ ಶರಣರು ಎಂದು ಅಲ್ಲಮ ಪ್ರಭು ಶರಣರ ಮಹಿಮೆಯನ್ನು ತಿಳಿಸಿದ್ದಾರೆ.

ಬಸವಣ್ಣನವರು ಶರಣರ ಗುಣಲಕ್ಷಣಗಳನ್ನು ತಮ್ಮ ವಚನಗಳಲ್ಲಿ ಇನ್ನಿಲ್ಲದಂತೆ ಬಣ್ಣಿಸಿದ್ದಾರೆ ಶರಣ ಸತ್ತು ಹುಟ್ಟುವನಲ್ಲ, ಸಂದೇಹಿ ಸೂತಕಿಯಲ್ಲ, ಕಾಯ ವಂಚಕನಲ್ಲ, ಜೀವವಂಚಕನಲ್ಲ. ಮನೆ ನೋಡಾ ಬಡವರು, ಮನ ನೋಡಾ ಘನ, ಸ್ವತಂತ್ರಧೀರರು, ನಡೆದು ತಪ್ಪುವನೇ ಶರಣನು? ನುಡಿದು ಹುಸಿವನೇ ಶರಣನು?

ಹೀಗೆ ಬಸವಣ್ಣನವರು ಶರಣರ ಬದುಕಿನ ನಿಲುವನ್ನು ಹೇಳಿರುವಂತೆ ಶರಣ ಹೇಗಿರಬೇಕು ಎಂಬುದನ್ನು ಹೇಳಿದ್ದಾರೆ:

**ಛಲ ಬೇಕು ಶರಣಂಗೆ ಪರಧನವನೊಲ್ಲೆನೆಂಬ**
**ಛಲ ಬೇಕು ಶರಣಂಗೆ ಪರಸತಿಯನೊಲ್ಲೆನೆಂಬ**
**ಛಲ ಬೇಕು ಶರಣಂಗೆ ಪರದೈವನೊಲ್ಲೆನೆಂಬ**
**ಛಲ ಬೇಕು ಶರಣoge ಲಿಂಗ ಜಂಗಮ ಒಂದೆ ಎಂಬ**
**ಛಲ ಬೇಕು ಶರಣಂಗೆ ಪ್ರಸಾದ ದಿಟವೆಂಬ**
**ಛಲವಿಲ್ಲದವರ ಮೆಚ್ಚ ನಮ್ಮ ಕೂಡಲಸಂಗಮದೇವ, (ವ.677)**

ಶರಣಧರ್ಮ ನೈತಿಕ ನೆಲಗಟ್ಟಿನ ಮೇಲೆ ನಿಂತಿರುವ ಧರ್ಮವಾಗಿರುವುದರಿಂದ ಈ ಧರ್ಮದ ಶರಣನೂ ನೈತಿಕ ಮೌಲ್ಯಗಳ ಪ್ರತಿನಿಧಿಯಾಗಿರಬೇಕು ಎಂದು ಬಸವಣ್ಣನವರು

ಹೇಳುತ್ತಾರೆ.

ಅಂತೆಯೇ ಶರಣ ಹೇಗಿರಬಾರದು ಎಂಬುದನ್ನು ಸಿದ್ದರಾಮ ಹೀಗೆ ಹೇಳಿದ್ದಾರೆ:

ಶರಣ 'ಪರಮ ಪಾವನ'ನಾಗಲು ಆಚಾರಗಳಿಗಲ್ಲ – ವಿಚಾರಗಳಿಗೆ, ಮಾನವೀಯ ಅಂತಃಕರಣಕ್ಕೆ ಮಹತ್ವ ಕೊಡುತ್ತಾರೆ. ಬಸವಣ್ಣನವರು 'ಕುಲಮದ ಮರೆತವನೇ ಶರಣ', ಶರಣರು 'ಹೆಪ್ಪನೆರೆದ ಹಾಲು ಕೆಟ್ಟು ತುಪ್ಪವಪ್ಪಂತೆ ಇಪ್ಪರು' (ವ.869) ಎಂದು ಹೇಳಿದ್ದಾರೆ.

**ಸಾಲೋಕ್ಯನಲ್ಲ ಸಾಮೀಪ್ಯನಲ್ಲ ಶರಣ.**
**ಸಾರೂಪ್ಯನಲ್ಲ ಸಾಯುಜ್ಯನಲ್ಲ ಶರಣ.**
**ಕಾಯನಲ್ಲ ಅಕಾಯನಲ್ಲ (ವ.689)**

ಹೀಗೆ ಅಲ್ಲಮಪ್ರಭು ಶರಣನ ಮಹತ್ವ ಸಾರಿದ್ದಾರೆ.

ಶರಣರು ಧೀರರು, ವೀರರು, ಗಂಭೀರ ಸ್ವಭಾವದವರು. ಅವರೊಡನೆ ಸರಸ ಸಲ್ಲದೆಂದು ಬಸವಣ್ಣನವರು ಹೇಳಿದ್ದಾರೆ – 'ಕೂಡಲ ಸಂಗನ ಶರಣರೊಡನೆ ಸರಸವಾಡಿದರೆ, ಅದು ವಿರಸ ಕಾಣಿರಯ್ಯ', 'ಕೂಡಲ ಸಂಗನ ಶರಣರೊಡನೆ ಸರಸವಾಡಿದರೆ ಸುಣ್ಣದಕಲ್ಲ ಮಡಿಲಲ್ಲಿ ಕಟ್ಟಿಕೊಂಡು ಮಡುವ ಬಿದ್ದಂತೆ' (ವ.662) ಎನ್ನುವಲ್ಲಿ ಶರಣರ ಮಹಿಮೆ ಕೊಂಡಾಡಿದ್ದಾರೆ.

ಒಟ್ಟಾರೆ ಶರಣ ಪದದ ಅರ್ಥ ವಿಶಾಲವ್ಯಾಪ್ತಿಯನ್ನು ಹೊಂದಿದ್ದು, ಶರಣ ಸಂಗ್ರಹ–ಪ್ರವೃತ್ತಿಯಿಂದ ದೂರವಿರಬೇಕು. ಶರಣ ಇಂದಿಗೆ – ನಾಳೆಗೆ ಎಂದು ಕೂಡಿಡಬಾರದು. ಅವರ ನಡೆ ನುಡಿಯಲ್ಲಿ ಮೇಳವಿರಬೇಕು. ಅವರಲ್ಲಿ ವಾಕ್‌ಶುದ್ಧಿ, ಮನಶುದ್ಧಿಯಿರಬೇಕು, ಅಹಿಂಸಾವಾದಿಯಾಗಿರಬೇಕು, ಸತ್ಯ, ನಿಷ್ಠೆಯ ಕಾಯಕನಿರತರಾಗಿರಬೇಕು ಎಂದೆಲ್ಲ ಶರಣರು ಶರಣನ ಗುಣ ಮಹಿಮೆಯನ್ನುಹಾಡಿದ್ದಾರೆ. ಶರಣರ ನಿಲುವು ಜಗದ ಏಳಿಗೆಯ ನಿಲುವಾಗಿದೆ ಎಂಬುದು ಇದರಿಂದ ತಿಳಿದು ಬರುತ್ತದೆ. ಇದೇ ಶರಣರ ಆಶಯವಾಗಿತ್ತು. ಅರಿದಡೆ ಶರಣ ಮರೆದಡೆ ಮಾನವ, ನುಡಿದಂತೆ ನಡೆಯುವವರು ಶರಣರು; ನಡೆದಂತೆ ನುಡಿಯುವವರು ಶರಣರು.

### ಕುಲಕಸುಬು ಅರ್ಥ ಮತ್ತು ಆಶಯ

ಕುಲಕಸುಬು ಎಂದರೆ ಪರಂಪರಾಗತ ವೃತ್ತಿಗಳು. ಮನೆತನದ ಉದ್ಯೋಗ, ಪರಂಪರಾಗತ ವೃತ್ತಿ, ಚೆನ್ನಾಗಿ ಯೋಚಿಸು, ಎಂಬ ಅರ್ಥಗಳಿವೆ. ಹೀಗೆ ಬೇರೆಬೇರೆ ಕುಲಕಸುಬುಗಳನ್ನು ಸ್ವೀಕರಿಸಿದ ಕುಟುಂಬಗಳು ಬೇರೆಬೇರೆ ಜಾತಿಗಳೆಂದು ವ್ಯವಸ್ಥೆಯಾಯಿತು. ಕುಲ ಎಂದರೆ ಗುಂಪು, ಸಮೂಹ, ರಾಶಿ ಎಂದೂ, ಕಸುಬು ಎಂದರೆ ವೃತ್ತಿ, ಕೆಲಸ, ಕಾಯಕ, ಉದ್ಯೋಗ, ಎಂದು ಅರ್ಥೈಸಲಾಗಿದೆ.[6]

''ಕುಲ' ಎಂದರೆ ಸಮೂಹ ಎಂದರ್ಥ. ಜನ ಸಮೂಹಗಳನ್ನು ಯಾವ ಆಧಾರದ ಮೇಲಾದರೂ ವಿಂಗಡಿಸಬಹುದು. ಯಾವುದೇ ಒಂದು ಸಾಮಾನ್ಯ ಲಕ್ಷಣವುಳ್ಳ ಒಂದು ಸಮೂಹವನ್ನು ಕುಲವೆಂದು ಕರೆಯಬಹುದು. ರಕ್ತ ಸಂಬಂಧಿಗಳು ಜೊತೆಗೂಡಿ ಕೆಲಸ ಮಾಡುವುದರೊಂದಿಗೆ ಎಲ್ಲರೂ ಜೊತೆಗೂಡಿ ಆಸ್ತಿಯನ್ನು ಹೊಂದಿ ಅನುಭವಿಸುವವರಿಗೆ ಕುಲದವರು ಅಥವಾ ಕುಲ ಸಮುದಾಯದವರೆಂದು ಕರೆಯಬಹುದು. 'ಕುಲಮೆಂಬುದುಂಟೆ ಬೀರಮೆ ಕುಲಮಲ್ಲದೆ ಕುಲಮನಿಂತು ಪಿಕ್ಕದಿರಿಂ ನೀ''[7] ಎನ್ನುವಲ್ಲಿ ಕುಲವು ಶೌರ್ಯದ ಸಂಕೇತವಾಗಿದೆ. ಕುಲಂ ಕುಲಮಲ್ತು ಚಲಂ ಕುಲಂ ಗುಣಂ ಕುಲಂ' ಎನ್ನುವಲ್ಲಿ ಪಂಪ

ಕರ್ಣನ ಮೂಲಕ ಕುಲ ಎಂದರೆ ಛಲ, ಸದ್ಗುಣ ಎಂದಿರುವುದು ಕುಲದ ಹಿರಿಮೆ ಸಾರುತ್ತದೆ. ಆದರೆ ಜಾತಿ ವಾಚಕವಾಗಿ ಬಳಸುವುದು ಬೇಡ ಎಂಬ ಅಭಿಪ್ರಾಯ ಶರಣರಲ್ಲಿ ಇರುವಂತೆ ಹುಟ್ಟಿದ ಜಾತಿ ಕುಲವಲ್ಲ ಎಂದು ಪಂಪ ಹೇಳುತ್ತಾ, 'ಮನುಷ್ಯ ಜಾತಿ ತಾನೊಂದೆ ವಲಂ' ಎಂದು ಮಾರ್ಮಿಕವಾಗಿ ಅರ್ಥೈಸಿದ್ದಾನೆ.

ಭಾರತೀಯ ಸಮಾಜದಲ್ಲಿ 'ಕುಲ' ಶಬ್ದಕ್ಕೆ ಈ ರೀತಿ ಅರ್ಥವಿವರಣೆ ಕೊಡಬಹುದು. ಕುಲವಿಭಜನೆಗೆ "ಕಸುಬು"[8] ಮುಖ್ಯವಾದ ಆಧಾರ. ಒಂದೇ ಕಸುಬನ್ನು ಮಾಡುವವರು ಒಂದೇ ಕುಲದವರು. ಕಸುಬುಗಳ ಆಧಾರದ ಮೇಲೆ ವಿಭಾಗವಾಗಿರುವ ಸಮುದಾಯಗಳೇ ಕುಲ ಅಥವಾ ಜಾತಿ. ಕುಲಗಳು ಬೆಳೆದಿದ್ದು ಬೇರೆ ಬೇರೆ ವೃತ್ತಿಗಳ ಆಧಾರದ ಮೇಲೆ ಕುಲಗಳಿಗೆ ಕೊಟ್ಟಿರುವ ಹೆಸರುಗಳಿಂದಲೇ ಆ ಕುಲಗಳ ಕಸುಬು ಏನೆಂಬುದನ್ನು ಅರ್ಥಮಾಡಿಕೊಳ್ಳಬಹುದು. ಭಾರತದಲ್ಲಿ ಕಸುಬನ್ನೇ ಆಧಾರವಾಗಿಟ್ಟುಕೊಂಡು ಒಂದೇ ಕಸುಬನ್ನು ಮಾಡುವವರಿಗೆಲ್ಲಾ ಒಂದೇ ಕುಲದವರು ಎಂದು ಪರಿಗಣಿಸಲಾಗಿದೆ. ಇದರಿಂದಲೇ ಕುಲಕಸುಬು ಎಂಬ ಶಬ್ದ ಬಂದಿರಬಹುದಾಗಿದೆ.

ಕುಲಕಸುಬು ಎಂದರೆ ಕೈಕಸುಬು, ಕಲೆಗಾರಿಕೆ, ವೃತ್ತಿಕಲೆಗಾರಿಕೆ, ಗುಡಿ ಕೈಗಾರಿಕೆ, ಗೃಹ ಕೈಗಾರಿಕೆ ಎಂಬ ಇತರೆ ಪ್ರಯೋಗಗಳು ಕಸುಬಿನ ವಿವಿಧಾರ್ಥವನ್ನು ಬಿಂಬಿಸುತ್ತವೆ. ಗ್ರಾಮೀಣ ಹಾಗೂ ನಗರ ಪ್ರದೇಶದ ಬಡವರು, ಭೂಮಿ ಇಲ್ಲದವರೂ ತಮ್ಮ ಹೊಟ್ಟೆ ಹೊರೆಯುವುದಕ್ಕಾಗಿ ತಲೆತಲಾಂತರದಿಂದ ಅನುಸರಿಸಿಕೊಂಡು ಬಂದ ಆನುವಂಶಿಕ ವೃತ್ತಿಗಳೇ ಕುಲಕಸುಬುಗಳೆನ್ನಬಹುದು. ಶರಣರ ದೃಷ್ಟಿಯಲ್ಲಿ ಇದು ಕಾಯಕವಾಗಿ ಶ್ರೇಷ್ಠತೆ ಪಡೆದಿದೆ. ಕಾಯಕವನ್ನು ಭಿನ್ನವಾದ ಅರ್ಥದಲ್ಲಿ ನೋಡಲು ಸಾಧ್ಯವಾಗಿದೆ. ಆರ್ಯರು ಭಾರತಕ್ಕೆ ಬರುವ ಮುನ್ನವೇ ಸಿಂಧೂ ನದಿಯ ತೀರದಲ್ಲಿ ವಾಸಮಾಡುತ್ತಿದ್ದ ಜನರ ಬಗೆ ಬಗೆಯ ಕಸುಬುಗಳ ಆಧಾರದ ಮೇಲೆ ಕುಲ ಅಥವಾ ಶ್ರೇಣಿಗಳ ವಿಭಾಗಗಳಿದ್ದುವೆಂಬುದು ಹರಪ್ಪ ಮೊಹೆಂಜೋದಾರೋ ಸಂಶೋಧನೆಗಳಿಂದ ದೃಢಪಟ್ಟಿದೆ. ಸಂಶೋಧಕರ ಪ್ರಕಾರ ಪಂಡಿತರು, ಯೋಧರು, ವ್ಯಾಪಾರಿಗಳು ಕುಶಲಕರ್ಮಿಗಳು ಅಂದರೆ ಗಾರೆಯವರು, ನೇಯ್ಗೆಯವರು, ಅಕ್ಕಸಾಲಿಗರು, ಕುಂಬಾರರು, ಕಮ್ಮಾರರು ಮುಂತಾದವರು ಉಳಿದ ಕೆಲಸ ಮಾಡುತ್ತಿದ್ದ ಚಮ್ಮಾರರು, ಮೇದರು, ರೈತರು ಮೊದಲಾದ ಪಂಗಡಕ್ಕೆ ಸೇರಿದವರು ಇದ್ದರು. ಆರ್ಯ ಸಂಸ್ಕೃತಿ ನಿರ್ಮಾಣವಾದ ಮೇಲೆ ಕುಲಭೇದಗಳು ಮುಂದುವರಿದವು. ಹೊಸ ಬೇಡಿಕೆಗಳನ್ನು ಈಡೇರಿಸಲು ಅನೇಕ ಕಸುಬುಗಳು ಏರ್ಪಟ್ಟವು. ಆರ್ಯರು ಪ್ರಾಕೃತಿಕ ಶಕ್ತಿಗಳನ್ನು ದೈವವೆಂದೂ ತಿಳಿದು ಆರಾಧಿಸುತ್ತಿದ್ದರು. ದೇವತೆಗಳ ಉಪಶಮನಕ್ಕಾಗಿ ಅವರ ಅನುಗ್ರಹ ಪಡೆಯುವುದಕ್ಕಾಗಿ ನಾನಾ ಬಗೆಯ ಯಜ್ಞಯಾಗಾದಿಗಳು ರೂಪುಗೊಂಡವು. ಯಜ್ಞಯಾಗಾದಿಗಳ ಆಚರಣೆಯಲ್ಲಿ ಪುರೋಹಿತರ ಪ್ರಾಧಾನ್ಯತೆ ಹೆಚ್ಚಾಯಿತು. ಪುರೋಹಿತರು ಸಮಾಜದಲ್ಲಿ ತಮ್ಮ ಔನ್ನತ್ಯವನ್ನು ಉಳಿಸಿಕೊಳ್ಳಲು ತಮ್ಮನ್ನು ಬ್ರಾಹ್ಮಣ ವರ್ಗದವರೆಂದು ಕರೆದುಕೊಂಡರು. ಸಮಾಜ ಆಳ್ವಿಕೆ ಮಾಡುವ ರಾಜರನ್ನು ಕ್ಷತ್ರಿಯರೆಂದೂ, ಉತ್ಪಾದನೆ ಮಾಡುವವರನ್ನು ವೈಶ್ಯರೆಂದೂ ಕರೆದರು. ಯಾರು ಆರ್ಯ ಸಂಸ್ಕೃತಿಗೆ ವಿರುದ್ಧವಾಗಿ ಆಚಾರ ವ್ಯವಹಾರಗಳನ್ನು ಇಟ್ಟುಕೊಂಡಿದ್ದರೋ ಅವರನ್ನೆಲ್ಲಾ ಕೀಳೆಂದು ಭಾವಿಸಿದರು. ವೈದಿಕ ಸಾಹಿತ್ಯದಲ್ಲಿ ವರ್ಣವ್ಯವಸ್ಥೆಯ ಉಗಮದ ಬಗ್ಗೆ ವಿವರವಿದೆ. ಇದರ ಪ್ರಕಾರ ಸಮಷ್ಟಿ ರೂಪನಾದ ಪುರುಷನ (ಪರಮಾತ್ಮನ) ಬಾಯಿಂದ ಬ್ರಾಹ್ಮಣರೂ, ಭುಜಗಳಿಂದ ಕ್ಷತ್ರಿಯರೂ, ತೊಡೆಗಳಿಂದ ವೈಶ್ಯರೂ ಪಾದಗಳಿಂದ ಶೂದ್ರರೂ ಜನಿಸಿದರು. ಪುರುಷನ ಅಂಗಗಳಲ್ಲಿ ಜನಿಸಿದ ವ್ಯಕ್ತಿಗಳಲ್ಲಿ ಆ ಅಂಗ ನಿರ್ವಹಿಸಬೇಕಾದ ಕಾರ್ಯಗಳನ್ನು ಸೂಚಿಸುತ್ತದೆ ಎಂಬ

ಸಾಂಕೇತಿಕ ಅರ್ಥದಲ್ಲಿ ತೆಗೆದುಕೊಳ್ಳಬಹುದು. ವರ್ಣ ವ್ಯವಸ್ಥೆಯಲ್ಲಿ ಕಾರ್ಯಗಳು ಮೇಲು-ಕೀಳು, ಶ್ರೇಷ್ಠ ಅಥವಾ ಕನಿಷ್ಠ ಎಂದು ಭಾವಿಸಕೂಡದು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಮತ್ತು ಶೂದ್ರ ಎಂಬ ಚತುರ್ವರ್ಣಗಳು ಒಂದು ದೇಹಕ್ಕೆ ಸೇರಿದ ಅಂಗಗಳು ಎಂಬುದನ್ನು ಗಮನದಲ್ಲಿಟ್ಟುಕೊಂಡು ಅದರಂತೆ ತಮಗೆ ನಿಯಮಿತವಾದ ಕರ್ತವ್ಯಗಳನ್ನು ನಿರ್ವಹಿಸುವುದು ಸೂಕ್ತ. ಶರಣರು ಇದನ್ನೇ ಅನುಸರಿಸಿರುವಂತೆ ತೋರುತ್ತದೆ.

ಜಾತಿ ಪದ್ಧತಿ ಬೆಳೆದಿದ್ದು ಕಸುಬುಗಳ ಆಧಾರದ ಮೇಲೆ ಸಮಾಜದ ಬೇಡಿಕೆಗಳು ಹೆಚ್ಚಾಗುತ್ತಾ ಹೆಚ್ಚು ಹೆಚ್ಚು ಕಸುಬುಗಳ ಅಗತ್ಯ ಕಂಡುಬಂದು ಜಾತಿಗಳ ಸಂಖ್ಯೆ ಕ್ರಮೇಣ ಹೆಚ್ಚಾಗುತ್ತಾ ಬಂದಿದೆ. ಋಗ್ವೇದದಲ್ಲಿ ರಾಜನ್ಯ, ರಥಕಾರ, ಬಡಗಿ, ಅಕ್ಕಸಾಲಿಗ, ರಜಕ ಇತ್ಯಾದಿ ಅನೇಕ ಕಸುಬುದಾರರ ಹೆಸರು ಕಂಡುಬರುತ್ತದೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಅನೇಕ ಕಸುಬುಗಳ ಜಾತಿಗಳ ಹೆಸರು ಕಂಡುಬರುತ್ತದೆ. ಒಂದೊಂದು ಜಾತಿಯವರು ತಮ್ಮ ಸಂಪ್ರದಾಯದಲ್ಲಿ ಬಂದ ಕಸುಬುಗಳನ್ನೇ ಅನುಸರಿಸುತ್ತಿದ್ದರು. ಕ್ರಮೇಣ ಪ್ರತಿಯೊಂದು ಜಾತಿಯೂ ತನ್ನ ಕಸುಬಿಗೆ ಅನುಗುಣವಾದ ಆಚಾರವ್ಯವಹಾರ, ಜೀವನ ರೀತಿಗಳನ್ನು ಬೆಳೆಸಿಕೊಂಡಿದ್ದರಿಂದ ಜಾತಿ ಜಾತಿಗಳ ನಡುವೆ ಈ ಪ್ರತ್ಯೇಕತಾ ಮನೋಭಾವ ಬೆಳೆಯಿತು. ಶಾಸನ ಹಾಗೂ ಸಾಹಿತ್ಯ ಕೃತಿಗಳಿಂದ ಭಾರತದಲ್ಲಿ ಹದಿನೆಂಟಕ್ಕಿಂತಲೂ ಹೆಚ್ಚು ಜಾತಿಗಳು ಇದ್ದವು ಎಂಬುದು ಗೊತ್ತಾಗುತ್ತದೆ. ವಚನಕಾರರು ಹದಿನೆಂಟು ಜಾತಿಗಳ ಪಟ್ಟಿಯನ್ನು ಕೊಟ್ಟಿದ್ದಾರೆ. ಸೊಡ್ಡಳ ಬಾಚರಸ ಎನ್ನುವವನು ಮನುಷ್ಯನ ದೇಹದ ಪ್ರತಿಯೊಂದು ಅಂಗಕ್ಕೂ ಒಂದೊಂದು ಜಾತಿಯನ್ನು ಸಮೀಕರಿಸಿ ಹದಿನೆಂಟು ಜಾತಿಗಳ ಪಟ್ಟಿಯನ್ನು ಕೊಟ್ಟಿದ್ದಾನೆ. ಅವುಗಳೆಂದರೆ ಬ್ರಾಹ್ಮಣ (ಶಿಖಿ), ಕ್ಷತ್ರಿಯ (ನಯನ), ಒಕ್ಕಲಿಗ (ತುಟಿ), ಗೊಲ್ಲ (ಕರ್ಣ), ಕುಂಬಾರ (ಕೊರಳು), ಪಂಚಾಳ, ಉಪ್ಪಾರ (ಅಂಗೈ ), ನಾಯಿಂದ (ಉಗುರು), ಡೊಂಬ (ಒಳದೊಡೆ), ಈಳಿಗ (ಮೊಣಕಾಲು), ಸಮಗಾರ (ಕಣಗಾಲು), ಮಚ್ಚಿಗ (ಮೇಗಾಲು), ಮತ್ತು ಶುದ್ಧ ಮಾದಿಗ (ಅಂಗಾಲು)," ಅಂಬಿಗರ ಚೌಡಯ್ಯನು ಇದೇ ರೀತಿ ಮನುಷ್ಯನ ದೇಹದ ಪ್ರತಿಯೊಂದು ಅಂಗಕ್ಕೂ ಒಂದೊಂದು ಜಾತಿಯನ್ನು ಸಮೀಕರಿಸಿ ಹದಿನೆಂಟು ಜಾತಿಗಳ ಉಲ್ಲೇಖ ಮಾಡಿದ್ದಾನೆ. ಈ ಮೇಲಿನ ಉಲ್ಲೇಖಗಳು ಮನುಷ್ಯನ ದೇಹವನ್ನು ಆಧಾರವಾಗಿಟ್ಟುಕೊಂಡು ಸಮಾಜದ ವಿಭಿನ್ನ ಸ್ಥರಗಳನ್ನು ವಿವರಿಸುವ ಪ್ರಯತ್ನವಾಗಿ ಕಂಡುಬರುತ್ತದೆ.

ವರ್ಣವ್ಯವಸ್ಥೆಯಲ್ಲಿ ಬರುವ ನಾಲ್ಕು ವರ್ಣಗಳು ತಮ್ಮವಲ್ಲದ ವೃತ್ತಿಗಳನ್ನು ಅವಲಂಬಿಸುತ್ತಿದ್ದರು ಎನ್ನುವುದು ಹಲವಾರು ಶಾಸನ ಹಾಗೂ ಕಾವ್ಯಗಳಿಂದ ತಿಳಿದುಬರುತ್ತದೆ. ಬ್ರಾಹ್ಮಣರು ಸಮಾಜದಲ್ಲಿ ಉನ್ನತ ಸ್ಥಾನವನ್ನು ಹೊಂದಿದ್ದರು. ಬ್ರಾಹ್ಮಣರ ಧಾರ್ಮಿಕ ಸ್ಥಾನಮಾನಕ್ಕೂ, ರಾಜಕೀಯ, ಆರ್ಥಿಕ ಸ್ಥಾನಮಾನಕ್ಕೂ ನಡುವೆ ನಿಕಟವಾದ ಸಂಬಂಧಗಳಿದ್ದವು. ರಾಜ್ಯವನ್ನು ಆಳುವುದು ಮತ್ತು ಪ್ರಜೆಗಳನ್ನು ರಕ್ಷಿಸುವುದು ಕ್ಷತ್ರಿಯರ ಕರ್ತವ್ಯವಾಗಿತ್ತು. ವೈಶ್ಯರು ವ್ಯಾಪಾರ, ವಾಣಿಜ್ಯ ಮತ್ತು ಕೃಷಿಯಲ್ಲಿ ತೊಡಗಿದ್ದು ರಾಜ್ಯದ ಆರ್ಥಿಕತೆ ದೃಷ್ಟಿಯಿಂದ ಪ್ರಮುಖ ಸ್ಥಾನ ಹೊಂದಿತ್ತು. ವೃತ್ತಿ ವ್ಯವಸ್ಥೆಯಲ್ಲಿ ಕೊನೆಯವರಾದ ಶೂದ್ರರು ತಮ್ಮಲ್ಲೇ ಹಲವಾರು ಜಾತಿ ಉಪಜಾತಿಗಳಾಗಿ ವಿಭಜನೆಗೊಂಡಿದ್ದರು. ಶೂದ್ರರಲ್ಲಿ ಮುಖ್ಯವಾಗಿ ವೃತ್ತಿಯ ಆಧಾರದ ಮೇಲೆ ಪಂಗಡಗಳು- ಉಪ ಪಂಗಡಗಳು ರಚನೆಗೊಂಡವು. ಶೂದ್ರರು ಇತರೆ ಜಾತಿಯವರಿಗಾಗಿ ದುಡಿಯುವ ಒತ್ತಾಯಕ್ಕೊಳಗಾಗಿದ್ದರು. ಇವರು ಕೃಷಿ, ಕೈಗಾರಿಕೆ, ವ್ಯಾಪಾರ ಹಾಗೂ ಇನ್ನಿತರ ವೃತ್ತಿಗಳಲ್ಲಿ ಪರಿಣತರಾಗಿದ್ದರು. ಅಗಸ, ನಾವಿದ, ನೇಕಾರ, ಬಳಗಾರ, ಬೆಸ್ತ, ತೈಲಿಗ, ಚಿಪ್ಪಿಗ, ಶಿಲ್ಪಿಗ, ಮಾಲೆಕಾರ, ಚಮ್ಮಾರ ಮುಂತಾದವರು

ಈ ವರ್ಗದೊಳಗೆ ಸೇರುತ್ತಿದ್ದರು. ಶಿಲ್ಪಿಗಳು ವಾಸ್ತುವಿದ್ಯೆ, ಶಿಲ್ಪ, ಲೋಹ ವಿಗ್ರಹಗಳ ಕೆತ್ತನೆ, ಚಿತ್ರಕಲೆ ಮುಂತಾದುವುಗಳಲ್ಲಿ ನಿಷ್ಣಾತರಾಗಿದ್ದರು. ಕಮ್ಮಾರ, ಬಡಗಿ, ಅಕ್ಕಸಾಲಿಗ, ಕಂಚುಗಾರ, ಮತ್ತು ಶಿಲ್ಪಿಗಳು ಒಂದೇ ಜಾತಿಯವರು. ಶಾಸನಗಳಲ್ಲಿ ಓಜಕುಲ ಎನ್ನುವ ಜಾತಿವಾಚಕಕ್ಕೆ ಸಿಗುವ ಸಮಾನವಾದ ಪದಗಳೆಂದರೆ ವಿಶ್ವಕರ್ಮಕುಲ, ವಿಶ್ವಕರ್ಮ ಕುಲಸ್ಥರು, ಪಾಂಚಕಾರುಕದವರು ಹಾಗೂ ಪಾಂಚಾಳರು. ಈ ಕುಶಲ ಕರ್ಮಿಗಳು ಪರಸ್ಪರ ವೃತ್ತಿ ವಿನಿಮಯ ಮಾಡಿಕೊಂಡಿರುವುದಕ್ಕೆ ಮತ್ತು ವೈವಾಹಿಕ ಸಂಬಂಧ ಬೆಳೆಸಿಕೊಂಡಿದ್ದರ ಬಗೆಗೂ ಶಾಸನಾಧಾರಗಳಿವೆ.

ಕುಲವನ್ನು ಕುರಿತು ಶರಣರ ನಿಲುವು ಬೇರೆಯಾಗಿತ್ತು. ಅದನ್ನು ತಮ್ಮ ವಚನಗಳಲ್ಲಿ ವ್ಯಕ್ತಪಡಿಸಿರುವುದನ್ನು ಕಾಣಬಹುದು.

**ಕುಲವನತಿಗಳೆದವಂಗೆ ಕುಲದ ಹಂಗೇತಕಯ್ಯಾ?**
**ಬಲ್ಲೆನೆಂಬವಂಗೆ ಗೆಲ್ಲಸೋಲದ ಹಂಗೇತಕಯ್ಯಾ?**
**ಅಮುಗೇಶ್ವರನೆಂಬ ಲಿಂಗವನರಿದ ಶರಣಂಗೆ**
**ಈ ಸಮಯದ ಹಂಗೇತಕಯ್ಯಾ? (ವ.48.)**

ಕುಲದ ಹಂಗಿಲ್ಲದೆ ಕಾಯಕ ಮಾಡುವವರು ಶರಣರು ಎಂದು ಈ ವಚನದಲ್ಲಿ ಮಾರ್ಮಿಕವಾಗಿ ಅಮುಗೆ ರಾಯಮ್ಮ ಹೇಳಿದ್ದಾರೆ.

**ಕುಲಛಲವ ಬಿಟ್ಟು ನಿಮ್ಮನೊಲಿಸಿದ ಶರಣರಿಗೆ**
**ತಲೆವಾಗುವೆ ನಾನು ಕುಲಜರೆಂದು. (ವ.69)**

ಶರಣರು ಕುಲಮದವನ್ನು ಬಿಟ್ಟು ಬದುಕಿದವರು ಎಂದು ಜೇಡರ ದಾಸಿಮಯ್ಯನ ವಚನ ಸಾರುತ್ತದೆ.

**ಕುಲಮದ ಛಲಮದ ವಿದ್ಯಾಮದದವರ ತೋರದಿರಾ. (ವ.464.)**

ಕುಲ, ಛಲ ಮತ್ತು ವಿದ್ಯಾ ಈ ಮೂರರ ಮದಗಳು, ಅಹಂಕಾರಗಳು ಒಳಿತಲ್ಲ ಎಂದು ಅಲ್ಲಮಪ್ರಭು ಹೇಳಿರುವಲ್ಲಿ ಕುಲಕಸುಬುಗಳಿಗಿಂತ, ಕಾಯಕ ಶ್ರೇಷ್ಠ ಎಂಬುದನ್ನು ಒತ್ತಿ ಹೇಳುವಂತಿದೆ. ಈ ಹಿನ್ನೆಲೆಯಲ್ಲಿ ನಮ್ಮ ಅಧ್ಯಯನದಲ್ಲಿ ಕುಲಕಸುಬುಗಳಿಗಿಂತ ಇಂದು ಕಸುಬುಗಳು ಎಷ್ಟು ಸತ್ಯ, ನಿತ್ಯ ಎಂಬುದನ್ನೂ, ಅವುಗಳ ಅಗತ್ಯತೆಯನ್ನು ವಿಶ್ಲೇಷಿಸುವುದು ಮುಖ್ಯ ಅಂಶವಾಗಿದೆ.

ಒಂದು ಕುಲಕ್ಕೆ ಒಂದು ಕಸುಬು ನಿರ್ದಿಷ್ಟವಾದಾಗ, ಯಾರೂ ತಮ್ಮ ಕುಲಕಸುಬನ್ನು ಬದಲಾಯಿಸಬಾರದು ಎಂಬ ನಂಬಿಕೆ ಬೆಳೆದಾಗ, ಅಂದರೆ ಪ್ರತಿಯೊಬ್ಬರು ತಮ್ಮ ಕುಲಕಸುಬುಗಳನ್ನೇ ಮಾಡಬೇಕೆಂದಾಗುತ್ತದೆ. ಅಂದರೆ ಪ್ರತಿಯೊಬ್ಬ ವ್ಯಕ್ತಿಯೂ ತಮ್ಮ ಜನ್ಮದಿಂದಲೇ ಒಂದು ಕುಲಕ್ಕೆ ಮತ್ತು ಆ ಕುಲದ ಕಸುಬಿಗೆ ಸೇರಿದವನಾಗಿರುತ್ತಾನೆ. ಆದ್ದರಿಂದಲೇ ಕುಲಕ್ಕೆ ಜಾತಿ ಎಂಬ ಅರ್ಥ ಬಂದದ್ದು. ಕುಲ, ಜಾತಿ ಶಬ್ದಗಳನ್ನು ಒಂದೇ ಅರ್ಥದಲ್ಲಿ ಉಪಯೋಗಿಸುವುದಕ್ಕೂ ಇದೇ ಕಾರಣ.

ಕುಲಕಸುಬಿನ ಬಗ್ಗೆ ಪೂಜ್ಯಭಾವನೆ ಬೆಳೆದಾಗ ಮಡಿ–ಮೈಲಿಗೆ, ಶುದ್ಧ–ಅಶುದ್ಧ, ಪವಿತ್ರ–ಅಪವಿತ್ರ ಮುಂತಾದ ಭಾವನೆಗಳು ಬೆಳೆಯುತ್ತವೆ. ಕುಲಗಳಲ್ಲಿ ಪರಸ್ಪರ ಪ್ರತ್ಯೇಕ ಮನೋಭಾವ ಬೆಳೆದು ಬೇರೆ ಬೇರೆ ರೀತಿಯ ಅಸ್ಪೃಶ್ಯತಾ ಮನೋಭಾವವು ಬೆಳೆಯಲು ಸಾಧ್ಯ. ಆಗ ಪ್ರತಿಯೊಂದು ಕುಲವು ತಮ್ಮದೇ ಆದ ಸಂಪ್ರದಾಯಗಳನ್ನು ಅನುಸರಿಸುತ್ತದೆ.

ಮೇಲು-ಕೀಳು ಭಾವನೆಗಳುಂಟಾಗುತ್ತವೆ. ಒಂದು ಕುಲದವರು ಇನ್ನೊಂದು ಕುಲದ ಕಸುಬನ್ನಾಗಲಿ ಆಚಾರ ಪದ್ಧತಿಯನ್ನಾಗಲಿ ಅನುಷ್ಠಾನ ಮಾಡುವುದು ನಿಷೇಧವಾಗಿರುತ್ತಿತ್ತು. ಕುಲಕಸುಬುದಾರರು ತಮ್ಮ ಕುಲಕಸುಬುಗಳನ್ನು ಕಾಪಾಡಿಕೊಳ್ಳಲು ಹೆದರಿಸುವ, ಭಯಪಡಿಸುವ ಅಥವಾ ಕೀಳುಮಟ್ಟದ ಕಾರ್ಯ ಎಂದು ಬಿಂಬಿಸಿರುವ ಸಾಧ್ಯತೆಗಳೂ ಇರಬಹುದು. ನಮ್ಮ ಸಮಾಜದಲ್ಲಿ ಜಾತಿಗಳು ಪರಸ್ಪರ ಪ್ರತ್ಯೇಕವಾದದ್ದು ಇದೇ ರೀತಿಯಲ್ಲಿ. ಈ ಪ್ರತ್ಯೇಕತೆಗೆ ಮುಖ್ಯ ಕಾರಣ ಕುಲಕಸುಬಿನ ಬಗ್ಗೆ ಒಂದು ಸಂಕುಚಿತ ಮನೋಭಾವ ಮತ್ತು ಆ ಕಸುಬಿನ ಆಧಾರದ ಮೇಲೆ ಬೆಳೆದ ಧಾರ್ಮಿಕ ಸಂಪ್ರದಾಯ. ಈ ಧಾರ್ಮಿಕ ಸಂಪ್ರದಾಯದ ಜೊತೆಗೆ ಕುಲದ ಮೇಲೆ ಬೇರೆ ಬೇರೆ ಮತಭೇದಗಳ ಪ್ರಭಾವವು ಉಂಟಾಗಬಹುದು. ಉದಾಹರಣೆಗೆ ಅನೇಕ ಕುಲದವರು ವೈಷ್ಣವ, ಶೈವ ಅಥವಾ ಜೈನ ಮತಾನುಯಾಯಿಯಾಗಿರಬಹುದು. ಆದರೆ ಅವರ ಕುಲಕಸುಬು ಕುಲಧರ್ಮಗಳ ಆಚರಣೆಯಲ್ಲಿ ಯಾವ ವ್ಯತ್ಯಾಸವೂ ಆಗದಿರಬಹುದು. ಒಂದು ಕುಲದಲ್ಲಿ ಕೆಲವರು ವೈಷ್ಣವ, ಕೆಲವರು ಶೈವ ಮತದ ಒಕ್ಕಲಾಗಿರಬಹುದು. ಅನೇಕ ಕುಲಗಳು ಒಂದೇ ಮತಕ್ಕೆ ಒಕ್ಕಲಾಗಿದ್ದರೂ ಅವು ತಮ್ಮ ಪ್ರತ್ಯೇಕತೆಯನ್ನು ತೊರೆದು ಸಮ್ಮಿಳಿತವಾಗುವುದಿಲ್ಲ. ಕುಲಕಸುಬು, ಕುಲಧರ್ಮಾಚರಣೆ, ಕುಲದೇವತಾ ಪೂಜೆ ಇವುಗಳು ಪ್ರತ್ಯೇಕವಾಗಿ ಇದ್ದೇ ಇರುತ್ತವೆ. ಧರ್ಮ ಚೌಕಟ್ಟಿನಲ್ಲಿ ಒಂದುಗೂಡಿಸಿದರೂ ಆ ಕುಲಗಳ ಪ್ರತ್ಯೇಕತೆ ಹೋಗುವುದಿಲ್ಲ. ಕುಲಕಸುಬುಗಳಿಗೆ ಪರಂಪರೆ ಇದೆಯೇ ಹೊರತು, ನಿರ್ದಿಷ್ಟ ತರಬೇತಿ ಇಲ್ಲ. ಹೆಚ್ಚಾಗಿ ಕೃಷಿಕನ ಆಶ್ರಯದಲ್ಲಿಯೇ ಆಸರೆ ಪಡೆದಂತವು, ಕೃಷಿಕನ ಮತ್ತು ರಾಜಾಶ್ರಯದ ಆಸರೆ ತಪ್ಪಿದಾಗ ನೆಲಕಚ್ಚಿವೆ. ಪ್ರಮುಖವಾಗಿ ಮೂಲಭೂತ ಜೀವನಾವಶ್ಯಕತೆಗಳನ್ನು ಪೂರೈಸುವುದಕ್ಕೋಸ್ಕರ ಇವು ಉದಯವಾದವು. ಸಾಮಾಜಿಕ ಜೀವನದಲ್ಲಿ ಜಮೀನು ಇಲ್ಲದವ, ತಮಗೆ ಇಷ್ಟವಾದ ತಮ್ಮ ಶಕ್ತಿ ಸಾಮರ್ಥ್ಯಕ್ಕನುಗುಣವಾಗಿ ಕಸುಬನ್ನು ಆಯ್ಕೆ ಮಾಡಿಕೊಂಡು ಅದರಲ್ಲಿ ತಮ್ಮ ಪರಿಣತಿಯನ್ನು ತೋರ್ಪಡಿಸಿಕೊಳ್ಳುತ್ತಾ ಅದನ್ನೇ ತನ್ನ "ಉಪಜೀವನ ವೃತ್ತಿ' ಯನ್ನಾಗಿಸಿಕೊಂಡ. ಹೀಗೆ ಬರಬರುತ್ತ ವಿವಿಧ ಕಸುಬುಗಳನ್ನು ತಮ್ಮ ಉಪಜೀವನದ ವೃತ್ತಿಯನ್ನಾಗಿಸಿಕೊಂಡ ವರ್ಗವೇ ಸಮಾಜದಲ್ಲಿ ರೂಪುಗೊಂಡಿದೆ. ಕೃಷಿಕ ಕೇಂದ್ರವಾದ ಆ ವರ್ಗ ಬಹು ವಿಸ್ತೃತವಾದುದು. ಪಶು ಸಂಗೋಪನೆ ಮತ್ತು ವ್ಯವಸಾಯ ಮಾಡುವ ಒಕ್ಕಲಿಗ, ಬಟ್ಟೆ ನೇಯುವ ನೇಕಾರ, ಬುಟ್ಟಿ ನೇಯುವ ಮೇದಾರ, ಕಲ್ಲು ಕಟಿಯುವ ಕಲ್ಲುಕುಟಿಗ, ಬಳೆ ತಯಾರಿಸುವ ಬಳೆಗಾರ, ಬಿದಿರು, ಬೆತ್ತದ ಸಾಮಗ್ರಿಗಳನ್ನು ತಯಾರಿಸುವ ಮೇದಾರ, ಸುಣ್ಣ ತಯಾರಿಸುವ ಸುಣ್ಣಗಾರ, ಮರದ ಉಪಕರಣಗಳನ್ನು ತಯಾರಿಸುವ ಬಡಗಿ, ಕಬ್ಬಿಣದ ಸಾಮಾನುಗಳನ್ನು ಹಣಿದು ತಯಾರಿಸಿಕೊಡುವ ಕಮ್ಮಾರ, ಮಡಕೆ-ಕುಡಿಕೆ ಮೊದಲಾದವುಗಳನ್ನು ತಟ್ಟಿ, ಸುಟ್ಟುಕೊಡುವ ಕುಂಬಾರ, ಚಿನ್ನ-ಬೆಳ್ಳಿಯ ವಸ್ತು ಒಡವೆಗಳನ್ನು ತಯಾರಿಸುವ ಪತ್ತಾರ, ಚರ್ಮದ ವಸ್ತುಗಳನ್ನು ತಯಾರಿಸುವ ಚಮ್ಮಾರ, ಕಂಚುಗಾರ, ಬಟ್ಟೆ ಶುಭ್ರಗೊಳಿಸುವ ಅಗಸ, ತಲೆಕೂದಲು ತೆಗೆಯುವ ಕ್ಷೌರಿಕ, ಬಟ್ಟೆ ಹೊಲೆಯುವ ಸಿಂಪಿಗ, ಕೌದಿ ಹೊಲೆಯುವ ದೋಶಿಗ, ಗಾದೆ ಹಾಕುವ ಪಿಂಜಾರ, ಮನೆಕಟ್ಟುವ ಉಪ್ಪಾರ, ಕುರಿ ಸಾಕುವ ಕುರುಬ, ಶಿಲ್ಪಗಳನ್ನು ತಯಾರಿಸುವ ಶಿಲ್ಪಿಗಾರ, ಔಷಧಿ ಕೊಡುವ ವೈದ್ಯ, ಹೂ ಪತ್ರೆ ಕೊಡುವ ಮಾಲೆ ತಯಾರಿಸುವ ಹೂಗಾರ, ದೇವ ದೇವಿಯರ ಪೂಜೆ ಮಾಡುವ ಪೂಜಾರ, ಊರ ಕಾಯುವ ತಳವಾರ, ಓಲೆ ಹಂಚುವ ಓಲೆಕಾರ ಇತ್ಯಾದಿ ಇವರೆಲ್ಲರೂ ಕಸುಬುದಾರರು-ಇವರು ವಂಶಪರಂಪರೆಯಾಗಿ ಕಸುಬುಗಳನ್ನು ಮಾಡಿಕೊಂಡು ಬರುತ್ತಿರುವ ಕುಲಕಸುಬುದಾರರು. ಈ ಕಸುಬುದಾರರೆಲ್ಲರೂ

ಒಂದೇ ಅಂತಸ್ತಿನವರಲ್ಲ. ಕೆಲವರು ಉನ್ನತ ದರ್ಜೆಯವರಾಗಿದ್ದರೆ, ಕೆಲವರು ಕೆಳದರ್ಜೆಯವರಾಗಿದ್ದಾರೆ. ಆದಾಗ್ಯೂ ಇವರಲ್ಲಿ ವಸ್ತು ವಿನಿಮಯ ಮತ್ತು ಸೇವಾವಿನಿಮಯ ಇದ್ದುದು ಗಮನಾರ್ಹ. ಇದು ಅವರ ಸಾಮಾಜಿಕ ಐಕ್ಯತೆಗೆ ಸಾಕ್ಷಿ. ಅವರೆಲ್ಲರೂ ಪರಸ್ಪರ ಅವಲಂಬಿಗಳು. ಹಾಗಾಗಿ ಅಲ್ಲಿ ಸಹಕಾರ–ಸಂಘಟನೆ ಅನಿವಾರ್ಯ. ಆದರೆ ತಲೆತಲಾಂತರವಾಗಿ ತಂದೆಯಿಂದ ಮಗನಿಗೆ, ಅತ್ತೆಯಿಂದ ಸೊಸೆಗೆ ಕೊಡಲಾದ ಕರಕೌಶಲ್ಯದ ಬಳಕೆ ನಿಧಾನವಾಗಿ ಜಾತಿಗಳಾಗಿ, ಪಂಗಡಗಳಾಗಿ ರೂಪಿತವಾದವು. ಇದರಿಂದ ಸಾಮಾಜಿಕ ಐಕ್ಯತೆ ಮುರಿದು ಹೋಯಿತು. ಜಾತಿ ವಿಜಾತಿ ಎಂಬ ತಾರತಮ್ಯ ಉಂಟಾಯಿತು. ಇಂಥ ಪರಿಸರದಲ್ಲಿ ಬಸವಾದಿ ಪ್ರಮಥರು ಜನ್ಮತಾಳಿ:

**ಕಾಸಿ ಕಮ್ಮಾರನಾದ ಬೀಸಿ ಮಡಿವಾಳನಾದ**

**ಹಸನಿಕ್ಕಿ ಸಾಲಿಗನಾದ, ವೇದವ ನೋದಿ ಹಾರುವನಾದ – ಬಸವಣ್ಣ (ವ.590)**

**ಕುಲವೇನೊ? ಅವಂದಿರ ಕುಲವೇನೊ? – ಬಸವಣ್ಣ (ವ.591)**

ಎಂದು ಪ್ರಶ್ನಿಸುವುದರ ಮೂಲಕ, ವೃತ್ತಿಯ ನಿಜಸ್ಥಿತಿಯನ್ನು ಹೇಳಿ, ಜಾತಿಯನ್ನು ಗಣಿಸದೆ, ವೃತ್ತಿಯನ್ನು ಕಾಯಕ ಸ್ಥರಕ್ಕೆ ಎತ್ತರಿಸಬೇಕಾಯಿತು. ಹೀಗಾಗಿ ಅವರ ದೃಷ್ಟಿಯಲ್ಲಿ ಅಂದಿನ ಮಾದಾರ, ಡೋಹಾರ, ಅಂಬಿಗ, ಸಮಗಾರ, ಕಮ್ಮಾರ, ಪತ್ತಾರ, ಕುಂಬಾರ ಹೆಸರುಗಳು ಜಾತಿ ವಾಚಿಯಲ್ಲ, ವೃತ್ತಿ ಸೂಚಿಗಳಾಗಿ ಕಂಡವು. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬ ಕಸುಬುದಾರನ ಕಸುಬು ಜಾತಿಯಲ್ಲ. ಅದು ವೃತ್ತಿ; ಕಾಯಕ ಆದರೂ ಕಾಲಕಾಲಕ್ಕೆ ಸಮಾಜದ ನಾಯಿ ಬಾಲ ಡೊಂಕೆಂಬಂತೆ ವೃತ್ತಿಗಳು ಜಾತಿಗಳಾಗಿಯೇ ಮುಂದುವರಿದುಕೊಂಡು ಬಂದಿವೆ. ಶರಣರು ಕುಲ ಮದವನ್ನು ಮೀರಿ ಬೆಳೆದವರು. ಕುಲಕಸುಬುಗಳನ್ನು ಅವರು ಕೇವಲ ಕುಲಕಸುಬುಗಳನ್ನಾಗಿ ನೋಡದೆ, ಆಧ್ಯಾತ್ಮಿಕದ ಹಿನ್ನೆಲೆಯಲ್ಲಿ ಸ್ವಕಾಯಕವನ್ನಾಗಿ ಮಾಡಿಕೊಂಡವರು. ಸ್ವಾವಲಂಬಿ ಬದುಕಿಗಾಗಿ ನಡೆದವರು.

'ಯೋಗಃ ಕರ್ಮಸು ಕೌಶಲಂ'[9] ಎಂಬುದನ್ನು ಬದುಕಿನಲ್ಲಿ ಅಳವಡಿಸಿಕೊಂಡ ಶರಣರು ತಮ್ಮ ವೃತ್ತಿಯಿಂದಲೇ ಆಧ್ಯಾತ್ಮಿಕ ಉನ್ನತಿ ಪಡೆಯಲು ಸಾಧ್ಯವೆಂಬ ಮಾತನ್ನು ಸಾಬೀತುಪಡಿಸಿದರು. ಶ್ರಮ ಗೌರವವೇ ಭಗವಂತನನ್ನು ಒಲಿಸುವ ಮಾರ್ಗ, ಮುಕ್ತಿಗೆ ಅರ್ಹವಾಗುವ ರೀತಿಯೆಂದು ಸ್ಥಿರಪಡಿಸಿದರು. ತಮ್ಮ ಕಸುಬುಗಳಲ್ಲಿ ತತ್ವಶಾಸ್ತ್ರ ತರ್ಕ, ವಿದ್ವತ್ತಿನ ಬದಲಿಗೆ ಶ್ರದ್ಧೆ, ಭಕ್ತಿ, ಕ್ರಿಯಾಶಕ್ತಿಯ ಬಳಕೆ ಮಾಡಿದ ಶ್ರೇಯಸ್ಸು ವಚನಕಾರರಿಗೆ ಸಲ್ಲುತ್ತದೆ. ವಿಧವಿಧ ಕಸುಬುಗಳ/ವೃತ್ತಿಯ ಶರಣ ಜನರು ತಮ್ಮ ತಮ್ಮ ವೃತ್ತಿಯನ್ನು ಕರ್ಮಯೋಗದ ನೆಲೆಗೆ ನಿಲ್ಲಿಸಿ, ಎಲ್ಲರೂ ಉದ್ಧಾರವಾಗಲೆಂಬ ಉದ್ದೇಶದಿಂದ ಆ ಸಂದೇಶವನ್ನು ಸೇರಿಸಿ ಬರೆದಿರುವ ಈ ವಚನಗಳು ಅಂದಿನ ಜನರಿಗೆ ಅವಶ್ಯಕವಾದ ವಿವಿಧ ವೃತ್ತಿಗಳನ್ನು ಕಲಿಸುವ ವೃತ್ತಿ ಶಿಕ್ಷಣವನ್ನು ಕೊಡುವುದರ ಜೊತೆಗೆ ಆ ಮೂಲಕ ಅವರ ಮನಃಪ್ರವೃತ್ತಿಯನ್ನು ಪರಿವರ್ತಿಸಿದವು.

ಹೀಗೆ ಮಾನವನ ಉಗಮದೊಂದಿಗೆ ಕಾಣಿಸಿಕೊಂಡ ಕಸುಬುಗಳು ವೇದಗಳ ಕಾಲದಲ್ಲಿ ಅಭಿವೃದ್ಧಿ ಹೊಂದಿದ್ದವು. ಕಸುಬುಗಳೊಂದಿಗೆ ಪೂಜ್ಯತೆಯು ಕಾಣಿಸಿಕೊಂಡಿತು. ಉಪನಿಷತ್ತು, ಸ್ಮೃತಿಗಳ ಕಾಲದಲ್ಲಿ ಅವು ಪರಿಷ್ಕರಣೆಗೊಂಡರೂ ಕೌಟುಂಬಿಕ ಹಿನ್ನೆಲೆಯಲ್ಲಿ, ಆನುವಂಶಿಕವಾಗಿ ಕಾಣಿಸಿಕೊಳ್ಳಲು ಪ್ರಾರಂಭಿಸಿದ್ದವು. ವೇದಗಳ ನಂತರದ ಕಾಲದಲ್ಲಿ ಸಾಮಾಜಿಕ ವ್ಯವಸ್ಥೆಯಲ್ಲಾದ ಸಂಕೀರ್ಣತೆಗಳೇ ಮುಂದಿನ ಹಲವಾರು ಅವಗಡಗಳಿಗೆ

ಕಾರಣಗಳಾಗಿ ಪರಿಣಮಿಸಿದವು. ಆರಂಭದಲ್ಲಿ ಇರದ ಜಾತಿಗಳು ನಂತರ ವೃತ್ತಿಗಳೊಂದಿಗೆ ಬೆಸೆದುಕೊಂಡವು. ಪ್ರತಿಯೊಂದು ವೃತ್ತಿಗೂ ಜಾತಿಯ ಜಾಡ್ಯತೆ ಅಂಟಿಕೊಂಡುದರಿಂದ ಸಾರ್ವತ್ರಿಕವಾಗಿ ವೃತ್ತಿಗಳ ಬಗೆಗಿರುವ ಪವಿತ್ರ ಭಾವನೆ ಸಂಕುಚಿತಗೊಂಡಿತು. ವೈಯಕ್ತಿಕ ಮಟ್ಟದಲ್ಲಿ ಜಾತಿ ಯಾವುದೇ ರೀತಿಯ ಪರಿಣಾಮ ಬೀರದಿದ್ದರೂ ಸಾಮೂಹಿಕ ಮಟ್ಟದಲ್ಲಿ ಒಂದು ನಿರ್ದಿಷ್ಟ ರೀತಿಯ ಜಾತಿ ಪಿರಮಿಡ್ ರಚನೆಗೆ ಕಾರಣವಾಯಿತು. ಕಸುಬುಗಳ/ ವೃತ್ತಿಯ ಹಿಂದಿರುವ ಪೂಜ್ಯತೆ ಯಾವ ಕಾಲದಲ್ಲಿಯೂ ಕಡಿಮೆಯಾಗಲಿಲ್ಲವೆಂಬುದು ಸಮಾಧಾನದ ಸಂಗತಿ. ಅದು ವ್ಯಷ್ಟಿ ಪ್ರಜ್ಞೆಯಲ್ಲಿ ಮಾತ್ರ. ಸಾಮಾಜಿಕ ಪರಿಸರದಲ್ಲಿ ಈ ವೃತ್ತಿಗಳು ತುಲನೆಗೊಳಪಟ್ಟಾಗ ಈ ಅಸಮಾನತೆ ನಿಚ್ಚಳವಾಗಿಯೇ ಗೋಚರಿಸಿತು. ಸಮಷ್ಟಿ ಪ್ರಜ್ಞೆ ಇನ್ನೂ ಬರಬೇಕಾಗಿದೆ. ಮೂಲತಃ ಶ್ರಮವನ್ನಾಶ್ರಯಿಸಿರುವ ಕಸುಬುಗಳಲ್ಲಿಯೇ ಮೇಲು-ಕೀಳೆಂಬ ವಿಚಾರಗಳು ವೇದೋತ್ತರದಲ್ಲಿ ಬೆಳೆದು ನಿಂತವು. ದೈಹಿಕ ಶ್ರಮವನ್ನು ಕೀಳಾಗಿ ಕಂಡು, ಬೌದ್ಧಿಕ ಶ್ರಮವನ್ನು ಮೇಲ್ವರ್ಗದ ಸಮಾಜ ಮಾನ್ಯ ಮಾಡಿತು. ಕಸುಬುಗಳಿಗೆ ಕುಲದ ಜಾಡ್ಯ ಅಂಟಿಕೊಂಡಿತು. ಅವರವರ ಕುಲಕಸುಬುಗಳು ಎಂದು ಬಿಂಬಿತವಾಗತೊಡಗಿದವು. ತರತಮ ಭಾವನೆಯಿಂದಾಗಿ ಜಾತಿಯಲ್ಲಿಯೂ ಮೇಲು-ಕೀಳು ಸೃಷ್ಟಿಯಾದವು. ಇದನ್ನು ಹೋಗಲಾಡಿಸಲು ಜಗತ್ತಿನಲ್ಲಿ ನಡೆದ ಮೊದಲ ಪ್ರಯತ್ನವೇ ಶರಣ ಚಳುವಳಿ.

ಶರಣರು ಕಸುಬುಗಳನ್ನು ಜಾತಿವಾಚಕವಾಗಿ ನೋಡದೆ, ತಾರತಮ್ಯವನ್ನು ಹೋಗಲಾಡಿಸಲು ಪ್ರಯತ್ನಿಸಿದರು. ಸಾಂದರ್ಭಿಕವಾಗಿ ಶರಣರು ತಮ್ಮ ಕುಲಕಸುಬನ್ನು ಉದ್ಯೋಗವನ್ನಾಗಿ ಮಾಡಿಕೊಂಡು ಅದನ್ನು ಕಾಯಕವೆಂದು ಪರಿಪಾಲಿಸಿಕೊಂಡು ಬಂದಿರುವುದನ್ನು ಕಾಣುತ್ತೇವೆ. ಹಾಗೂ ಅವರು ಕುಲಕಸುಬುಗಳಿಂದ ಸ್ವಾವಲಂಬಿ ಬದುಕನ್ನು ಕಟ್ಟಿಕೊಂಡಿದ್ದರು ಎಂಬುದು ತಿಳಿದುಬರುತ್ತದೆ. ವಚನಕಾರರು 'ಕಾಯಕ' ತತ್ತ್ವವನ್ನು ಪ್ರತಿಪಾದಿಸುವಾಗ ಬಹುಮುಖ್ಯವಾದ ಕೆಲ ಅಂಶಗಳನ್ನು ಸೂಚಿಸಿದ್ದಾರೆ. ಇಂಥ ಕಾರ್ಯ ಮಾಡಬೇಕು, ಇಂಥವನ್ನು ಮಾಡಬಾರದು ಎನ್ನುವ ಯಾವುದೇ ಕಟ್ಟುಪಾಡುಗಳನ್ನು ವಿಧಿಸಿಲ್ಲ. ತಮಗೆ ಸರಿಯೆಂದು ಕಂಡುಬರುವ ವೈಯಕ್ತಿಕವಾಗಿ ತೃಪ್ತಿಯುಂಟುಮಾಡುವ, ಮನಸ್ಸಿಗೆ ನೆಮ್ಮದಿಯನ್ನು ಕೊಡುವ ಯಾವುದಾದರೂ ಕಾಯಕವನ್ನು ಕೈಗೊಳ್ಳಬಹುದಾಗಿದೆ. ಶತ-ಶತಮಾನಗಳಿಂದ ಬಂದಿರುವ 'ವಂಶವೃತ್ತಿ ಅಂದರೆ 'ಕುಲಕಸುಬ'ನ್ನೇ ಮಾಡಬೇಕೆಂಬ ಕಡ್ಡಾಯವನ್ನೂ ಹೇರುವುದಿಲ್ಲವೆಂಬುದು ಗಮನಾರ್ಹವಾದ ಅಂಶವಾಗಿದೆ. ಒಂದು ವೃತ್ತಿ ಬಿಟ್ಟು ಮತ್ತೊಂದು ವೃತ್ತಿಯನ್ನು ಮಾಡಬಹುದು. ವೃತ್ತಿಗಳನ್ನು ಬದಲಾಯಿಸುವುದಕ್ಕೆ ಇವರು ಆಕ್ಷೇಪವೆತ್ತುವುದಿಲ್ಲ. ಎಲ್ಲ ಕಾಯಕಗಳೂ ಒಂದೇ ಆಗಿವೆ. ಎಲ್ಲಕ್ಕೂ ಸರಿ-ಸಮಾನವಾದ ಸ್ಥಾನವಿದೆಯೆಂದು ಸಾರಿದರು. ಕಾಯಕದಲ್ಲಿ ಜಾತಿ-ಮತ, ಮೇಲು-ಕೀಳು, ಶ್ರೇಷ್ಠ-ಕನಿಷ್ಠ, ಮಡಿ-ಮೈಲಿಗೆ ಇತ್ಯಾದಿ ತಾರತಮ್ಯಗಳು ಇಲ್ಲವೆಂದು ಸ್ಪಷ್ಟಪಡಿಸಿದ್ದಾರೆ. ಮುಖ್ಯವಾಗಿ ಶರಣರು ಕಾಯಕ ತತ್ತ್ವವನ್ನು ಪ್ರತಿಪಾದಿಸಿರುವುದು ವರ್ಗ-ವರ್ಣ ವ್ಯವಸ್ಥೆಯ ನಿರ್ಮೂಲನ ಮಾಡುವುದಕ್ಕಾಗಿಯೇ ಇರಬಹುದು. ಇದಕ್ಕೆ ಒಂದೆರಡು ವಚನಗಳ ಉದಾಹರಣೆ ನೋಡಬಹುದು.

**"ಅಸಿ ಮಸಿ ಕೃಷಿ ವಾಣಿಜ್ಯ ಮುಂತಾದ ಕಾಯಕವ ಮಾಡಿ**
**ಭಕ್ತರ ಪಡುಗ ಪಾದತ್ರಾಣ ಪಹರಿ ಬಾಗಿಲ ಬೊಕ್ಕಸ ಬೀಯಗ**
**ಮುಂತಾದ ಕಾಯಕವಂ ಮಾಡಿ..."**

ಎಲ್ಲ ಕಾಯಕಗಳು ಒಂದೇ ಎಂದು ಅಕ್ಕಮ್ಮ ಹೇಳಿದ್ದಾಳೆ.

**“ಆವ ಕಾಯಕ ಮಾಡಿದರೂ ಒಂದೇ ಕಾಯಕವಯ್ಯಾ.....’’**

**– ಗಂಗಮ್ಮ**

**‘‘ಅಸಿಯಾಗಲಿ ಮಸಿಯಾಗಲಿ ಕೃಷಿಯಾಗಲಿ**
**ವಾಣಿಜ್ಯ ಮುಂತಾದ ಕೃಷಿಯ ಮಾಡುವಲ್ಲಿ**
**ಪಶುಪತಿಗೆಂದೇ ಪ್ರಮಾಣಿಸಿ.......**

**ಮೋಳಿಗೆ ಮಾರಯ್ಯ**

ಈ ವಚನಗಳು ಸಮಾಜದಲ್ಲಿ ಕಾಯಕ ಸಮಾನತೆ ಸಾರುತ್ತವೆ.

ಜರ್ಮನ್ ದೇಶದಲ್ಲಿ ಮೊಚ್ಚಿಗರನಾಗಿದ್ದ ಜೇಕಬ್ ಬೋಹೆಮೆ ಎಂಬ ಜಗತ್ಪ್ರಸಿದ್ಧ ಅನುಭಾವಿಯು ತಾನು ಕಾಲುತಾಸಿನ ಅವಧಿಯಲ್ಲಿ ಕಂಡದ್ದು ಮತ್ತು ಅರಿತುಕೊಂಡದ್ದು, ಅನೇಕ ವರ್ಷಗಳವರೆಗೆ ವಿಶ್ವವಿದ್ಯಾಲಯಗಳಲ್ಲಿ ಅರಿತುಕೊಂಡದ್ದಕ್ಕಿಂತ ಅಧಿಕವಾಗಿದೆಯೆಂದು ಹೇಳಿದ್ದಾನೆ. ವೀರಶೈವ ವಚನಕಾರರು ಉಚ್ಚ ತರಗತಿಯ ಶಿಕ್ಷಣವಿಲ್ಲದೆ ಉಚ್ಚತಮವಾದ ವಚನಗಳ ಮಳೆಗರೆದಿರುವುದನ್ನು ನೋಡಿದರೆ ಮಹದಾಶ್ಚರ್ಯವುಂಟಾಗುತ್ತದೆ. ಇವರಲ್ಲಿ 36 ಜನ ಮಹಿಳೆಯರು, ಸುಮಾರು 200 ಜನ ಕೈಗಾರಿಕೆಯ ಕಸುಬುಗಳನ್ನು ಮಾಡುವವರೂ ಇದ್ದಾರೆ. ನಿರಕ್ಷರಿಗಳಾದ ಇವರಲ್ಲಿ ಅನೇಕರು ತಮ್ಮ ತಮ್ಮ ಕಾಯಕದ ದ್ವಾರವಾಗಿ ವಚನಗಳನ್ನು ರಚಿಸುವುದರಲ್ಲಿ ತೋರಿಸಿರುವ ಅದ್ಭುತ ಅನುಭಾವವು ನಮ್ಮನ್ನು ಬೆರಗುಗೊಳಿಸುತ್ತಿದೆ. ಈ ತರದ ವಚನಗಳು ಇನ್ನಿತರ ಸಾಹಿತ್ಯದಲ್ಲಿ ಕಂಡು ಬರುವುದು ಕ್ವಚಿತ.’’[10]

ಇಲ್ಲಿಯೂ ಕೂಡ ಶರಣರು ಸ್ವ ಉದ್ಯೋಗ ಮಾಡುತ್ತಾ ಅಂದರೆ ಕಸುಬುಗಳನ್ನು ಮಾಡುತ್ತಾ ಪ್ರಾಮಾಣಿಕ ಹಾಗೂ ಸ್ವತಂತ್ರವಾಗಿ ಜೀವನ ಸಾಗಿಸುತ್ತಿದ್ದರು ಎಂಬುದು ಕಂಡುಬರುತ್ತದೆ.

ಹನ್ನೆರಡನೆಯ ಶತಮಾನದ ವೀರಶೈವ ಸಾಹಿತ್ಯದಲ್ಲಿ ಹಲವಾರು ವಿಧದ ಕಾಯಕಗಳ ಉಲ್ಲೇಖವಿದೆ. ವೃತ್ತಿ ಏಣಿಶ್ರೇಣಿಯು ಉತ್ತಮ ವೃತ್ತಿಯಿಂದ ಹಿಡಿದು ಅಸ್ಪೃಶ್ಯರ ಕೀಳುವೃತ್ತಿಯವರೆಗೆ ವ್ಯಾಪಿಸಿತ್ತು. ಪಂಡಿತರು (ಶಿವಲೆಂಕೆ ಮಂಚಣ್ಣ), ಅರಸರು (ಸಕಲೇಶ ಮಾದರಸ), ವೈದ್ಯ (ವೈದ್ಯ ಸಂಗಣ್ಣ) ತೆರಿಗೆ ವಸೂಲಿ ಮಾಡುವವನು (ಸುಂಕದ ಬಂಕಣ್ಣ), ಪಾರುಪತ್ತೆದಾರ (ಬೊಕ್ಕಸದ ಸಂಗಣ್ಣ), ಮರಗೆಲಸಕಾರ (ಬಿಬ್ಬಿ ಕಾಯಕದ bಸವಣ್ಣ), ಕಾವಲುಗಾರ (ತಳವಾರ ಕಾಮಿದೇವ), ರೈತ (ಒಕ್ಕಲು ಮುದ್ದಯ್ಯ), ಚಾಮರ bೀಸುವವನು (ಸತ್ತಿಗೆ ಕಾಯಕದ ಮಾರಿತಂದೆ), ಅಂಬಿಗ (ಅಂಬಿಗರ ಚೌಡಯ್ಯ), ವಿದೂಷಕ (ಬಹುರೂಪಿ ಚೌಡಯ್ಯ), ಕ್ಷೌರಿಕ (ಹಡಪದ ಅಪ್ಪಣ್ಣ), ಅಗಸ (ಮಡಿವಾಳ ಮಾಚಯ್ಯ), ಇನ್ನೂ ಮುಂತಾದವರು ವಚನ ರಚಿಸಿದ್ದಾರೆ. ಶಿವಶರಣೆಯರಲ್ಲಿ ವಚನ ರಚಿಸಿದವರೆಂದರೆ ನೇಕಾರಳು (ಕದಿರ ಕಾಯಕದ ಕಾಳವ್ವ), (ಕದಿರ ರೆಮ್ಮವ್ವ), ಕನ್ನಡಿ ಹಿಡುವವಳು (ಕನ್ನಡಿ ಕಾಯಕದ ರೇಮಮ್ಮ), ಹಗ್ಗ ಹೆಣೆಯುವವಳು (ಕಾಳ ಕಣ್ಣೆಯ ಕಾಮಮ್ಮ), ಕಬ್ಬಿಣದ ಹೆಂಚು ಮಾರುವವಳು (ಪಿಟ್ಟವ್ವ), ಅಕ್ಕಿ ಕುಟ್ಟುವವರು (ಕೊಟ್ಟಣದ ಕೆಮ್ಮವ್ವ, ಕೊಟ್ಟಣದ ಸೋಮಮ್ಮ), ಅಕ್ಕಿ ಆರಿಸುವವರು (ಆಯ್ದಕ್ಕಿ ಲಕ್ಕಮ್ಮ), ಕಸಗುಡಿಸುವವಳು (ಸತ್ಯಕ್ಕ) ಮತ್ತು ವೇಶ್ಯ (ಸೂಳೆ ಸಂಕವ್ವ)[11] ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಒಟ್ಟಾರೆ ಕಾಯಕ/ವೃತ್ತಿ/ ಕಸುಬುಗಳನ್ನು ಪ್ರಧಾನ ಎಂದು ಶರಣರು ಅಳವಡಿಸಿಕೊಂಡಿರುವುದು.

**ಕುಲಕಸುಬುಗಳ ವರ್ಗೀಕರಣ**

ಶರಣ ಅಂಬಿಗರ ಚೌಡಯ್ಯನವರು ತಮ್ಮ ಒಂದು ವಚನದಲ್ಲಿ ವಿವಿಧ

ಕುಲಕಸುಬುಗಳ/ ವೃತ್ತಿಯವರ/ಆಯಗಾರರನ್ನು ಉಲ್ಲೇಖಿಸಿರುವುದನ್ನು ಕಾಣಬಹುದು:

**ಶೀಲವಂತರು ಶೀಲವಂತರು ಎಂದು ಶೀಲದಲ್ಲಿ ಆಚರಿಸುವ**
**ಅಣ್ಣಗಳೇ ನಿಮ್ಮ ಶೀಲವಾವುದು ಹೇಳಿರೋ,**
**ಅರಿಯದಿದ್ದರೆ ಕೇಳಿರೋ:**
**ಶಿರಸ್ಸಿನಲ್ಲಿ ಶಿವನಿಪ್ಪ, ಕಟಿಯಲ್ಲಿ ವಿಷ್ಣುವಿಪ್ಪ,**
**ಆಧಾರದಲ್ಲಿ ಬ್ರಹ್ಮನಿಪ್ಪ,**
**ಲಲಾಟದಲ್ಲಿ ವಿಭೂತಿರುದ್ರಾಕ್ಷಿ,**
**ಜಿಹ್ವೆಯಲ್ಲಿ ಪಂಚಾಕ್ಷರಿಯು.**
**ಇಂತಪ್ಪ ಅಷ್ಟಾವರಣದಲ್ಲಿ ಸವೆಯದೆ,**
**ಸಂಸಾರವೆಂಬ ಶರಧಿಯಲ್ಲಿ ಮುಳುಗೇಳುವರು ಶೀಲವಂತರಲ್ಲ.**
**ಬರಿದೆ ನಾವು ಶೀಲವಂತರೆಂಬುವ ಮನುಜ ಕೇಳು:**
**ಕಣ್ಣೇ ಕಂಚುಗಾರ, ಕರ್ಣವೇ ಬಣಜಿಗ, ಮೂಗೇ ಈಳಿಗ,**
**ಕೊರಳೇ ಕುಂಬಾರ, ತುಟಿಯೇ ಹೆಂಡಗಾರ, ಹಲ್ಲೆ ಕಲ್ಲುಕುಟಿಗ,**
**ತಲೆಯೇ ಮೋಪುಗಾರ, ಬೆನ್ನೇ ಜೇಡ, ಅಂಗೈಯೇ ಅಕ್ಕಸಾಲಿಗ,**
**ಮುಂಗೈಯೇ bಡಿಗ, ಕರವೇ ಕೋಮಟಿಗ,**
**ಕಣಕಾಲೇ ಕಾಳಿಂಗ, ಕುಂಡಿಯೇ ಕುಡುವೊಕ್ಕಲಿಗ,**
**ಒಳದೊಡೆಯೇ ಸಮಗಾರ, ಹೊರದೊಡೆಯೇ ಮಚ್ಚಿಗ,**
**ಮೇಗಾಡಿ ಹೊಲೆಯ, ಬುದ್ಧಿಯೇ ಬಯಲಗಂಬಾರ.**
**ಇಂತಪ್ಪ ಕುಲ ಹದಿನೆಂಟು ಜಾತಿ**
**ಎಲು ಮಾಂಸವನು ತುಂಬಿಟ್ಟುಕೊಂಡು**
**ನನ್ನ ಕುಲ ಹೆಚ್ಚು, ನಿನ್ನ ಕುಲ ಕಡಿಮೆ ಎಂದು**
**ಹೊಡೆದಾಡುವಂತಹ ಅಣ್ಣಗಳನ್ನು ಹಿಡಿತಂದು**
**ಮೂಗನೆ ಸವರಿ ಮೆಣಸಿನ ಹಿಟ್ಟು ತುಪ್ಪವ ತುಂಬಿ**
**ನಮ್ಮ ಪಡಿಹಾರಿ ಉತ್ತಣ್ಣನ ವಾಮಪಾದುಕೆಯಿಂದ**
**ಪಡಪಡನೆ ಹೊಡಿ ಎಂದಾತ,**
**ನಮ್ಮ ಅಂಬಿಗರ ಚೌಡಯ್ಯ ನಿಜಶರಣನು.**[12]

ಶಿವರರಣರು ತಮ್ಮ ಶಿವಾನುಭವಕಾರ್ಯದಲ್ಲಿ ಉದ್ಯೋಗಗಳಿಗೆ ಮಹತ್ವದ ಸ್ಥಾನವನ್ನು ಕೊಟ್ಟಿದ್ದಾರೆ. ಆದ್ದರಿಂದ ಶಿವಶರಣರಲ್ಲಿ ಎಲ್ಲತರದ ಕಸುಬುದಾರರು ಇದ್ದಾರೆ. ಕಸುಬುಗಳಲ್ಲಿ ಇಂಥವು ಕೀಳುತರದವು ಇಂಥವು ಹೆಚ್ಚಿನತರದವು ಎಂಬ ತಾರತಮ್ಯ ಭಾವವು ಇರುವುದಿಲ್ಲ. ಆದ್ದರಿಂದ ಕಸುಬುಗಳ ಮೂಲಕ ವೀರಶೈವರಲ್ಲಿ ಉಚ್ಚ ನೀಚ ಭಾವವೆಂಬುದು ಉಂಟಾಗಲಾರದು. ಇದೊಂದು ಕ್ರಾಂತಿಕಾರಕ ತತ್ವವು. ಇದರ ಮೂಲಕ ವೀರಶೈವ ಧರ್ಮದ ಪ್ರಗತಿಯು ಬಸವೇಶ್ವರನ ಕಾಲದಲ್ಲಿ ಬಹು ತೀವ್ರವಾಗಿ ಎಲ್ಲ ಸಮಾಜಗಳಲ್ಲಿ ಆದಂತೆ ತೋರುತ್ತದೆ. ಕಸುಬುಗಳನ್ನು ಮಾಡುತ್ತಿದ್ದ ಶಿವಶರಣರ ವಿವರಣೆಯು ಕೆಳಗೆ ಕಾಣಿಸಲಾಗಿದೆ.

**ಫ.ಗು.ಹಳಕಟ್ಟಿ ಅವರು ಸಂಗ್ರಹ ಮಾಡಿರುವಂತೆ ಕುಲಕಸುಬುಗಳ ವರ್ಗೀಕರಣ:**[13]

1. ಒಕ್ಕಲುತನ ಮಾಡುವವರು – ಅಜಗಣ್ಣ, ಇಳಿಹಾಳ ಬೊಮ್ಮಣ್ಣ, ಒಕ್ಕಲಿಗ ಮುದ್ದಯ್ಯ, ಮುಕ್ತಾಯಕ್ಕ, ಏಲೇಶ್ವರ ಕೇತಯ್ಯ, ಬಡಿಹೋರಿ ಬ್ರಹ್ಮಯ್ಯ, ಮಾರಗೌಡ, ರೆಮ್ಮವ್ವ,

ಅಕ್ಕಮ್ಮ, ಗೊಗ್ಗಯ್ಯ,

2. ಕಟ್ಟಿಗೆ ಮತ್ತು ಕುಳ್ಳು ಮಾರುವವರು: ಮೋಳಿಗೆಯ ಮಾರಯ್ಯ, ಸಪ್ಪೆ ಯಲ್ಲಮದೇವ, ಅಣ್ಣಿಲದೇವಿ, ಮಾದಾರ ಚನ್ನಯ್ಯ,
3. ರಾಟಿಯ ಕಾಯಕದವರು – ಅಮ್ಮ ಮತ್ತು ಕದಿರು ರೆಮ್ಮ,
4. ನೆಯ್ಗೆಯ ಕಾಯಕ ಮಾಡುವವ: – ಅಮುಗಿದೇವ
5. ಓಲೆಗಳನ್ನು ಮಾರುವವರು: ಓಲೆಯ ಶಾಂತ ಮತ್ತು ನಿಜಲಿಂಗಚಿಕ್ಕೆಯ್ಯ
6. ಕುರುಬನು: – ಗೊಲ್ಲಾಳ,
7. ಹಗ್ಗ ಮಾಡುವವ – ನುಲಿಯ ಚಂದಯ್ಯ,
8. ದೋಸೆ ಮಾಡುವವಳು: – ಪಿಟ್ಟವ್ವೆ
9. ಗಾಣಿಗನು: – ಮಾರುಡಿಗೆಯ ನಾಚಯ್ಯ, ಅನಾಮಿಕ ನಾಚಯ್ಯ
10. ಮೇದರರು: – ಮೇದಾರ ಕೇತಯ್ಯ, ಮೊರನ ವೇಮಯ್ಯ,
11. ಅಕ್ಕಸಾಲಿಗರು: – ವರದಾನಿ ಗದ್ದ, ಹಾವಿನಹಾಳೆ ಕಲ್ಲಯ್ಯ,
12. ಕುಂಬಾರನು: – ಕುಂಬಾರ ಗುಂಡಯ್ಯ
13. ಭತ್ತ ಕುಟ್ಟುವವಳು: ಕೊಟ್ಟಣದ ಸೋಮವ್ವೆ
14. ದನಕಾಯುವವರು: – ತೆಲುಗೇಶ ಮಸಣಯ್ಯ, ಗೋರಕ್ಷ
15. ಚರ್ಮ ಹದ ಮಾಡುವವ: – ಮಾದಾರ ಧೂಳಯ್ಯ,
16. ನೀರು ಹಾಕುವವರು: – ಅಗ್ಗವಣೆಯ ಹೊನ್ನಯ್ಯ.

    ಅಲ್ಲದೆ ರಾಜ್ಯಾಧಿಕಾರಿಗಳೂ ಅವರಲ್ಲಿ ಇದ್ದಾರೆ.

17. ಅಧಿಕಾರಿಗಳು: – ಗುಪ್ತಮಂಚಣ್ಣ, ತಂಗಳೂರು ಮಾರ, ರಾಯಸದ ಮಂಚಣ್ಣ, ಸೊಡ್ಡಳ ಬಾಚರಸ,
18. ಗ್ರಾಮದ ಗೌಡನು: – ಮುಸುಡಿಯ ಚೌಡಯ್ಯ,
19. ವ್ಯಾಪಾರಸ್ಥರು: ಆದಯ್ಯ, ಭಳ್ಳೇಶ ಮಲ್ಲಯ್ಯ, ಶಿವಪ್ರಿಯನಾಚಿ,
20. ವಾದ್ಯ ನುಡಿಸುವವರು – ಅಲ್ಲಮಪ್ರಭುದೇವ,
21. ಅಂಬಿಗ(ದೋಣಿ ನಡೆಸುವವರು) – ಅಂಬಿಗರ ಚೌಡಯ್ಯ ಹೀಗೆ ಅನೇಕ ತರದ ಕಸುಬುಗಳನ್ನು ಮಾಡುವವರು ಶಿವಶರಣರಲ್ಲಿ ಆಗಿಹೋಗಿದ್ದಾರೆ.

ಡಾ. ಬಸವರಾಜ ಸಬರದ ಅವರು ಐದು ರೀತಿಯಲ್ಲಿ ಶರಣರ ಕಾಯಕಗಳನ್ನು ಈ ಕೆಳಗಿನಂತೆ ವರ್ಗೀಕರಿಸಿದ್ದಾರೆ:

1. ಉತ್ಪಾದನಾ ಮೂಲ ಕಾಯಕಗಳು
2. ಕೌಶಲ್ಯಮೂಲ ಕಾಯಕಗಳು
3. ಅಗತ್ಯ ಸೇವೆಯ ಕಾಯಕಗಳು
4. ವೃತ್ತಿನಿರತ ಕಾಯಕಗಳು
5. ಕಲಾಸಂಬಂಧಿ ಕಾಯಕಗಳು

6. ಮಹಿಳೆಯರ ಕಾಯಕಗಳು

ಡಾ. ರಘುಶಂಖ ಭಾತಂಬ್ರ ಅವರು ತಮ್ಮ ಅಧ್ಯಯನದಲ್ಲಿ ಕುಲಕಸುಬುಗಳನ್ನು ವೃತ್ತಿಗಳೆಂದು ಕರೆದು ಈ ಕೆಳಕಂಡಂತೆ ವರ್ಗೀಕರಣ ಮಾಡಿರುತ್ತಾರೆ:

1. ಕೃಷಿ 2. ಒಕ್ಕಲಿಗ 3. ಆಯಗಾರರು 4. ಸಂಕೀರ್ಣ ವೃತ್ತಿಗಳು 5. ಕಲಾ ವೃತ್ತಿಗಳು 6. ಮಹಿಳಾ ವೃತ್ತಿಗಳು

ಒಟ್ಟಾರೆ ಶರಣರು ತಮ್ಮ ವಚನಗಳಲ್ಲಿ ಕುಲಕಸುಬುಗಳ ಕುರಿತು ಸಕಾರಾತ್ಮಕವಾಗಿ ಚಿಂತನೆಗಳನ್ನು ಮಾಡಿರುವುದು ಕಂಡು ಬರುತ್ತದೆ.

**ಕೊನೆ ಟಿಪ್ಪಣಿಗಳು:**

1. ಜನಪದ ಜೋಕಾಲಿ
2. ಸಂಪಾದಕ ಮಂಡಳಿ, (2021), ಬಸವಣ್ಣನವರ ವಚನ ಸಂಪುಟ (ಸಮಗ್ರ ವಚನ ಸಂಪುಟ 1, ವ.ಸಂ. 654), ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.
3. ಕನ್ನಡ ಸಾಹಿತ್ಯ ಪರಿಷತ್ತು (ಸಂಪಾದಕ ಮಂಡಳಿ), ಕನ್ನಡ ನಿಘಂಟು (ಸಂಪುಟ–8), ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು, ಪು.ಸಂ. 8081.
4. ಸಂಪಾದಕ ಮಂಡಳಿ, (2021), ಚನ್ನಬಸವಣ್ಣನವರ ವಚನ ಸಂಪುಟ (ಸಮಗ್ರ ವಚನ ಸಂಪುಟ 3, ವ.ಸಂ. 582), ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ, ಪು.ಸಂ. 236.
5. ಸಂಪಾದಕ ಮಂಡಳಿ, (2021), ಸಿದ್ಧರಾಮೇಶ್ವರ ವಚನ ಸಂಪುಟ (ಸಮಗ್ರ ವಚನ ಸಂಪುಟ 4, ವ.ಸಂ. 1690), ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ, ಪು.ಸಂ. 522.
6. ಕನ್ನಡ ಸಾಹಿತ್ಯ ಪರಿಷತ್ತು (ಸಂಪಾದಕ ಮಂಡಳಿ), ಕನ್ನಡ ನಿಘಂಟು (ಸಂಪುಟ–2), ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು, ಪು.ಸಂ. 1960.
7. ಅನಂತರಂಗಾಚಾರ್ ಎನ್. (ಗದ್ಯಾನುವಾದ), (2016), ಪಂಪ ಭಾರತಂ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
8. ಅದೇ, ಪು.ಸಂ. 160.
9. ಶೇಷಗಿರಿರಾವ್ ಎಲ್.ಎಸ್. (ಅನುವಾದ), (2024), ಭಗವದ್ಗೀತೆ ಯಥಾ ರೂಪ (ಶ್ಲೋಕ 50), ಬೆಂಗಳೂರು: ಭಕ್ತಿವೇದಾಂತ ಬುಕ್ ಟ್ರಸ್ಟ್, ಪು.ಸಂ. 127.
10. ಗಂಟಾಳ ಎಸ್.ಆರ್., ವಚನ ಸಾಹಿತ್ಯದ ಉಗಮ ಮತ್ತು ವಿಕಾಸ.
11. ಚಂದ್ರಶೇಖರ ಟಿ.ಆರ್. (ಅನುವಾದ), ಅನುಭಾವಿಗಳ ಕ್ರಾಂತಿ, ಗದಗ: ವೀರಶೈವ ಅಧ್ಯಯನ ಸಂಸ್ಥೆ (ತೋಂಟದಾರ್ಯಮಠ), ಪು.ಸಂ. 132.
12. ಸಂಪಾದಕ ಮಂಡಳಿ, (2021), ಸಂಕೀರ್ಣ ವಚನ ಸಂಪುಟ–1 (ಸಮಗ್ರ ವಚನ ಸಂಪುಟ–6, ವ.ಸಂ. 260), ಬೆಂಗಳೂರು:ಕನ್ನಡ ಪುಸ್ತಕ ಪ್ರಾಧಿಕಾರ, ಪು.ಸಂ. 98.
13. ಹಳಕಟ್ಟಿ, ಫ.ಗು., (1951), ಶಿವಶರಣರ ಚರಿತೆ – ಭಾಗ–2 (ಪ್ರಸ್ತಾವನೆ), ಪು.ಸಂ. 50.

**ಪರಾಮರ್ಶನ ಗ್ರಂಥಗಳು:**


1. ಕಲಬುರ್ಗಿ ಎಂ.ಎಂ., (1978), ಶಾಸನಗಳಲ್ಲಿ ಶಿವಶರಣರು, ಗದಗ: ವೀ.ಶೈ.ಅ.ಸಂ. ತೋಂಟದಾರ್ಯ ಮಠ.
2. ಹಿರೇಮಠ ಬಿ.ಆರ್., (1986), ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಧಾರವಾಡ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.
3. ನಾರಾಯಣ ಪಿ.ವಿ., (1983), ವಚನ ಸಾಹಿತ್ಯ: ಒಂದು ಸಾಂಸ್ಕೃತಿಕ ಅಧ್ಯಯನ, ಗದಗ: ತೋಂಟದಾರ್ಯ ಮಠ.
4. ಬಸವರಾಜು ಎಲ್. (ಸಂ.), (2021), ಸರ್ವಜ್ಞನ ವಚನಗಳು, ಮೈಸೂರು: ಗೀತಾ ಬುಕ್ ಹೌಸ್.
5. ಹಳಕಟ್ಟಿ ಫ.ಗು., (1931), ನೈತಿಕ ಮತ್ತು ಭಕ್ತಿಯ ವಚನಗಳು, ಬಿಜಾಪುರ: ಶಿವಾನುಭವ ಗ್ರಂಥಮಾಲಾ.
6. ಸಂಪಾದಕ ಮಂಡಳಿ (ವಿವಿಧ), (2021), ಸಮಗ್ರ ವಚನ ಸಾಹಿತ್ಯ ಸಂಪುಟಗಳು 1–15, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.
7. ಎಂ. ಚಿದಾನಂದಮೂರ್ತಿ, (2015), ವಚನ ಸಾಹಿತ್ಯ: ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ, ಬೆಂಗಳೂರು: ಸಪ್ನ ಪ್ರಕಾಶನ.
8. ವಿಜಯಶ್ರೀ ಸಬರದ, (2022), ಶಿವಶರಣೆಯರ ಸಾಹಿತ್ಯ ಚರಿತ್ರೆ, ಬೆಂಗಳೂರು: ಕ್ರಿಯಾ ಪ್ರಕಾಶನ.
9. ಬಿ.ವಿ. ವಸಂತಕುಮಾರ, ಕಾಯಕ ಮೀಮಾಂಸೆ, ಮೈಸೂರು.
10. ವೀರಣ್ಣ ಸಿ., ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ ಸಂಪುಟ–1 ಮತ್ತು 2, ಬೆಂಗಳೂರು: ನವಕರ್ನಾಟಕ ಪ್ರಕಾಶನ.
11. ಸಿದ್ದಯ್ಯ ಪುರಾಣಿಕ, (1964), ಶರಣ ಚರಿತಾಮೃತ, ಮೈಸೂರು: ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ.
12. ದೇವೇಂದ್ರಕುಮಾರ ಹಕಾರಿ ಮತ್ತು ಕೆ.ಆರ್. ಸಂಧ್ಯಾರೆಡ್ಡಿ, (2000), ಗ್ರಾಮೀಣ ವೃತ್ತಿಗಳು, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.
13. ಅಶೋಕ ನರೋಡೆ ಮತ್ತು ಡಾ. ಎಸ್.ಆರ್. ಸಂಧ್ಯಾರೆಡ್ಡಿ (ಸಂ.), ವಚನ ಚಳುವಳಿ ಕೆಲವು ಅಧ್ಯಯನಗಳು, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
14. ವೀರೇಶ ಬಡಿಗೇರ, (2020), ಕರ್ನಾಟಕ ಆಯಗಾರರ ಸಂಸ್ಕೃತಿ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
15. ಗಂಟಾಳ ಎಸ್.ಆರ್., ವಚನ ಸಾಹಿತ್ಯದ ಉಗಮ ಮತ್ತು ವಿಕಾಸ.
16. ದಂಡೆ ನಂದೀಶ್ವರ, (2019), ವೃತ್ತಿ ನಿರತ ವಚನಕಾರರು: ವಚನಗಳ ಅಭಿವ್ಯಕ್ತಿ ಸ್ವರೂಪ ಮತ್ತು ತಾತ್ವಿಕತೆ (ಮಹಾಪ್ರಬಂಧ), ಹಂಪಿ: ಕನ್ನಡ ವಿಶ್ವವಿದ್ಯಾಲಯ.
17. ಮಹೇಶ ಕಿಳ್ಳಿಕ್ಯಾತರ, ಸ್ಥಳೀಯ ಕುಲಕಸುಬುಗಳು ಮತ್ತು ಜನಬದುಕು, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.
18. ರಘುಶಂಖ ಭಾತಂಬ್ರಾ, (2010), ವಚನಕಾರರ ವೃತ್ತಿ ಮೌಲ್ಯಗಳು ಒಂದು ಅಧ್ಯಯನ (ಪುಸ್ತಕ ರೂಪ), ಕಲಬುರ್ಗಿ: ಗುಲ್ಬರ್ಗಾ ವಿಶ್ವವಿದ್ಯಾಲಯ.
19. ಬಿ.ಜಿ. ಸಿದ್ಧಲಿಂಗಮ್ಮ, (2017), ಮಧ್ಯಕಾಲೀನ ಕರ್ನಾಟಕದಲ್ಲಿ ಕುಶಲಕರ್ಮಿಗಳು.